# ದ,ನ, ನಾ, ನಿ, ನೊ, ಅಕ್ಷರದ ವಚನದ ಅರ್ಥ

1) ದೂರದಲ್ಲಿರ್ದಹೆಯೆಂದು ಆನು ಬಾಯಾರಿ ಬಳಲುತ್ತಿರ್ದೆನಯ್ಯಾ.
ಸಾರಿ ಬೆರಸಿ ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡಡೆ
ಎನ್ನ ಆರತವೆಲ್ಲವೂ ಲಿಂಗಾ ನಿಮ್ಮಲ್ಲಿ ನಟ್ಟಿತು ನೋಡಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ.
ನಿಮ್ಮನು ಕರಸ್ಥಲದಲ್ಲಿ ನೋಡಿ ಕಂಗಳೆ ಪ್ರಾಣವಾಗಿರ್ದೆನಯ್ಯ.

### ಪದಗಳ ಅರ್ಥ

ಬಾಯಾರಿ-ಹಂಬಲಿಸಿ,
ಸಾರೆ --ಹತ್ತಿರ, ಸಮೀಪ,
ರತಿ--ಪ್ರೀತಿ.
ಆಲಿ-ಕಣ್ಣಾಲಿಗಳು.

### ವಚನದ ಅರ್ಥ

ದೂರದಲ್ಲಿರ್ದೆಯೆಂದು ಬಾಯಾರಿ ಬಳಲುತ್ತಿಹೆನಯ್ಯ. ದೂರದಲ್ಲಿರುವೆ ಯೆಂದು ನಿಮಗಾಗಿ ದಾರಿ ನೋಡಿ ಹಂಬಲಿಸಿದ್ದೇನೆ. ಸಾರೆ ಬಂದು ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡಡೆ ಇನ್ನಾರತಿಯೆಲ್ಲ ನಿಮ್ಮಲ್ಲಿ ಲಿಂಗಯ್ಯ. ನೀನು ಕರಸ್ಥಲದಲ್ಲಿಯೆ ಆಕಾರಗೊಂಡಿರುವಾಗ ನನ್ನ ಪ್ರೀತಿಯನ್ನೆಲ್ಲ ನಿಮ್ಮಲ್ಲಿಯೆ ನಿವೇದಿಸುತ್ತಿದ್ದೇನೆ. ಆಲಿ ನಟ್ಟವು ನಿಮ್ಮಲ್ಲಿ ಚೆನ್ನಮಲ್ಲಿಕಾರ್ಜುನಯ್ಯ. ನಿಮ್ಮನನ್ನ ಕರಸ್ಥಲದಲ್ಲಿ ನೋಡಿ ನೋಡಿ ಕಂಗಳೆ ಪ್ರಾಣವಾಗಿರ್ದೆನಯ್ಯ. ನನ್ನ ಕಣ್ಣಾಲಿಗಳ ನೋಟ ನಿಮ್ಮಲ್ಲಿಯೆ ನೆಲೆ ಗೊಂಡಿವೆ. ಚೆನ್ನಮಲ್ಲಿಕಾರ್ಜುನನೆ ನಿಮ್ಮನ್ನು ಕರಸ್ಥಲದಲ್ಲಿ ನೋಡುತ್ತಿದ್ದೇನೆ. ನನ್ನ ಕಣ್ಣುಗಳೆ ಪ್ರಾಣವಾಗಿ ನಿಮ್ಮನ್ನು ನೋಡುತ್ತ ಇದ್ದೇನೆ ನೀನು ಎಲ್ಲೊ ದೂರ ಇರುವೆಯೆಂದು ಹಂಬಲಿಸಿ ಕನವರಿಸಿ ಕೊರಗುತ್ತಿ ರ್ದೆನು. ಆದರೆ ನೀನು ಇಲ್ಲಿಯೆ ಇಷ್ಟಲಿಂಗ ರೂಪದಲ್ಲಿ ನನ್ನ ಕರಸ್ಥಲದಲ್ಲಿರುವೆ. ಇನ್ನು ಆ ಭಕ್ತಿಯೆಲ್ಲ ಇಲ್ಲಿಯೆ ವ್ಯಕ್ತಮಾಡುತ್ತೇನೆ. ಕರಸ್ಥಲದಲ್ಲಿ ನೋಡುತ್ತ ನೋಡುತ್ತ ನಿದ್ದೆ, ಎಚ್ಚರ ಮರೆತು ನಿನ್ನ ಧ್ಯಾನದಲ್ಲಿದ್ದೇನೆ.

ಇಂತಹ ವಚನಗಳಿಗೆ ವ್ಯಾಖ್ಯಾನ ಮಾಡುವಾಗ ಕೆಲವು ನಿಷ್ಠೂರ ಮಾತುಗಳನ್ನು ಧರ್ಮಗುರುಗಳ ಬಗೆಗೆ ಬರೆಯ ಬೇಕೆನ್ನಿಸುತ್ತದೆ. ಗುರುಗಳಾದವರು ಇಷ್ಟ ಲಿಂಗದೀಕ್ಷೆ ನೀಡುವಾಗ ಇಷ್ಟಲಿಂಗದ ಬಗೆಗೆ ಸರಿಯಾದ ಪರಿಚಯ,ಮಾಹಿತಿ ಕೊಡ ಬೇಕು. ಎಲ್ಲರೂ ಅಕ್ಕಮಹದೇವಿಯವರಂತೆ ಪರಮಾತ್ಮನನ್ನು ಸಾಧಿಸಿಕೊಳ್ಳಲು ಆಗುವುದಿಲ್ಲ. ಇಷ್ಟಲಿಂಗವು ಒಂದು ಸಾಧನ. ಅದು ಯೋಗದ, ಅನುಸಂಧಾನಕ್ಕೆ ,ಧ್ಯಾನಕ್ಕೆ ಸಹಕಾರಿ. ಅನುಭಾವ ಸಾಧನೆಗೆ ಇದೊಂದುದಾರಿಬೆಳಕು. ಇದೆ ಪರ ಮಾತ್ಮ ಅಲ್ಲ. ಇದೇನಿದ್ದರೂ ಕುರುಹು ಅರಿವಿಗೆ ಒಂದು ಕೈದೀವಿಗೆ. ಇದರಿಂದ ಪರಬ್ರಹ್ಮದ ತಿಳವಳಿಕೆ ಸುಲಭವಾಗಿ ದೊರೆಯುತ್ತದೆ . ಎಂದು ತಿಳಿಸಿಕೊಡಬೇಕು.

2) ದೃಶ್ಯವಾದ ರವಿಯ ಬೆಳಗು ಆಕಾಶದ ವಿಸ್ತೀರ್ಣ. '
ವಾಯುವಿನ ಚಲನೆ, ತರುಗುಲ್ಮಲತಾದಿಗಳಲ್ಲಿಯ ತಳಿರು ಪುಷ್ಪ
ಷಡುವರ್ಣಂಗಳೆಲ್ಲ ಹಗಲಿನ ಪೂಜೆ. ಚಂದ್ರಪ್ರಕಾಶ, ನಕ್ಷತ್ರ, ಅಗ್ನಿ ವಿದ್ಯುತ್ತಾದಿಗಳು
ದೀಪ್ತಮಯವೆನಿಸಿಪ್ಪವೆಲ್ಲ ಇರುಳು  ಪೂಜೆ. ಹಗಲಿರುಳು ನಿನ್ನ ಪೂಜೆಯಲ್ಲಿ ಎನ್ನ ಮರೆದಿಪ್ಪೆನಯ್ಯಾ
ಚೆನ್ನಮಲ್ಲಿಕಾರ್ಜುನಾ.

ವಚನದ ಅರ್ಥ

ಅನುಭಾವಿಗಳು ಪ್ರಕೃತಿಯ ಆರಾಧಕರು.ನವೋದಯದ ಕವಿಗಳು ಪ್ರಕೃತಿ ಆರಾಧಕರೆಂದು 20ನೆಯ ಶತಮಾನದ ವಿಮರ್ಶಕರು ಮಾತಾಡುತ್ತಾರೆ.

ಅಕ್ಕನವರು ಪೂಜೆಗೆ ಕುಳಿತುಕೊಳ್ಳುವ ಸ್ಥಳವೆಲ್ಲವೂ ಸುಂದರ ನಿಸರ್ಗದ ಸ್ಥಳಗಳೆ ಆಗಿರುತ್ತವೆ. ಅವರು ನಡೆಸುವ ಪೂಜೆಯಲ್ಲಿ
ನಿಸರ್ಗದ ಆರಾಧನೆಯೆ ಎದ್ದು ಕಾಣುತ್ತದೆ. ಇಲ್ಲಿ ಅಕ್ಕ ಮಹಾದೇವಿಯವರು ನಡೆಸಿರುವ ಇಷ್ಟಲಿಂಗಪೂಜೆಯು ಪ್ರಕೃತಿ ಪೂಜೆಯೆ ಆಗಿದೆ. ಈ ವಚನದಲ್ಲಿ ಹಗಲು ರಾತ್ರಿಗಳನ್ನೆ ನಿಸರ್ಗದ ವಿದ್ಯಮಾನಗಳನ್ನು ಇಲ್ಲಿ ಪೂಜೆಯಾಗಿ ಚಿತ್ರಿಸಲಾಗಿದೆ.

ದೃಶ್ಯವಾದ ರವಿಯ ಬೆಳಗು ಆಕಾಶದ ವಿಸ್ತೀರ್ಣ.ವಾಯುವಿನ ಚಲನೆ, ತರು ಗುಲ್ಮಲತಾದಿಗಳಲ್ಲಿ ತಳಿರು ಪುಷ್ಪಷಡುವರ್ಣಂಗಳೆಲ್ಲ ಸೂರನ ಪ್ರಭೆ. ಸೂರ್ಯನ ಬೆಳಕು, ಆಕಾಶದ ಅನಂತ,ಗಾಳಿಯಸುಳಿದಾಟ, ಗಿಡಮರಬಳ್ಳಿಗಳ ಚಿಗುರು,ಹೂವುಆರು ಬಣ್ಣಗಳೆಲ್ಲ ಹಗಲಿನ ಪೂಜೆ.ಚಂದ್ರಪ್ರಕಾಶ, ನಕ್ಷತ್ರ, ಅಗ್ನಿ, ವಿದ್ಯುತ್ ಆದಿಗಳು ದೀಪಿ ಮಯವೆನಿಸಿದ್ದವೆಲ್ಲ ಇರುಳು ನಿಮ್ಮ ಪೂಜೆ. ರಾತ್ರಿಯ ಪೂಜೆ ಯೆಂದರೆ ಚಂದ್ರನ ಬೆಳದಿಂಗಳು, ನಕ್ಷತ್ರಗಳ ಮಿನುಗು, ಅಗ್ನಿಯ ಪ್ರಕಾಶ, ದೀಪದಬೆಳಕು ಇವೆಲ್ಲ ಇರುಳಿನ ಪೂಜೆ. ಹಗಲಿರುಳು ನಿಮ್ಮ ಪೂಜೆಯಲ್ಲಿ ಎನ್ನ ಮರೆದಿಪ್ಪೆನಯ್ಯ. ಚೆನ್ನಮಲ್ಲಿಕಾ ರ್ಜುನನೆ ಹಗಲುರಾತ್ರಿ ನಾನು ಈ ನಿಸರ್ಗದ ಪೂಜೆಯಲ್ಲಿ ಧ್ಯಾನ ಮಗ್ನಳಾಗಿದ್ದೇನೆ. ಈ ಪ್ರಕೃತಿ ಪೂಜೆಯಲ್ಲಿ ನನ್ನ ನಾನು ಮರೆತು ನಿಮ್ಮ ಈ ಅದ್ಭುತ ಸೃಷ್ಟಿಯನ್ನು ಧ್ಯಾನಿಸುತ್ತ ಆನಂದದಲ್ಲಿದ್ದೇನೆ. ನಿಜ ಅರ್ಥದಲ್ಲಿ ಶರಣರು ಪ್ರಕೃತಿ ಉಪಾಸಕರು. ಪ್ರಕೃತಿ ಉಪಾಸಕರು ಎಂದು ಹೇಳಿಕೊಳ್ಳುವ ಕವಿಗಳು ಪ್ರಕೃತಿಯ ನಡುವೆ ವಾಸಿಸುವುದಿಲ್ಲ. ಆದರೆ ಶರಣರು,ತಪಸ್ವಿಗಳು ಪ್ರಕೃತಿಯ ನಡುವೆ ವಾಸಮಾಡುತ್ತಾರೆ . ನಿತ್ಯ ಪ್ರಕೃತಿಯ ವಿದ್ಯಮಾನವನ್ನೆಲ್ಲ ಗಮನಿಸುತ್ತಾರೆ.
ಆರಾಧನಾಮನೋಭಾವದಿಂದ ಅಲ್ಲಿ ಜೀವನ ಮಾಡುತ್ತಾರೆ. ಪರಿಶುದ್ಧ ಜೀವನದಿಂದ ಲೋಕವನ್ನು ಬೆಳಗುತ್ತಾರೆ,

3). ದೃಷ್ಟಿವರಿದು ಮನ ನೆಲೆಗೊಂಡುದಿದೇನೊ? ಆವನೆಂದರಿಯೆ ಭಾವ ನಟ್ಟುದವ್ವಾ.
ಕಳೆವರಿದು ಅಂಗ ಗಸಣೆ ಯಾದುದವ್ವಾ. ಇನ್ನಾರೇನೆಂದಡೆ ಬಿಡೆನು ಚೆನ್ನಮಲ್ಲಿಕಾರ್ಜುನಲಿಂಗವ.

ಪದಗಳ ಅರ್ಥ

ಅರಿದು-ಸ್ಥಿರಗೊಂಡು
.ಗಸಣೆ-ಕಾತುರ..

ವಚನದ ಅರ್ಥ

ಅಕ್ಕಮಹಾದೇವಿಯವರಿಗೆ ಧ್ಯಾನದ ಮಹತ್ವ ಬಹಳವಾಗಿ ಹಿಡಿಸಿದೆ. ಧ್ಯಾನದ ದಾರಿಯಲ್ಲಿ ಆನಂದಯೋಗವನ್ನು ಅವರು ಸಾಧ್ಯವಾಗಿಸಿಕೊಂಡಿದ್ದಾರೆ. ದೃಷ್ಟಿಯೋಗದಲ್ಲಿ ಮನಸ್ಸಿಟ್ಟು ಸಾಧನೆ ನಡೆಸಿದ್ದಾರೆ. ಪರಮಾತ್ಮನ ಬಿಟ್ಟು ಇನ್ನೊಂದು ಚಿಂತೆಯಿಲ್ಲದ ಅಕ್ಕನವರು ಮನಸ್ಸು ಭಾವದ ತುಂಬ ಚೆನ್ನಮಲ್ಲಿಕಾರ್ಜುನನನ್ನೆ ತುಂಬಿಕೊಂಡಿದ್ದಾರೆ.ಅವನು ಹೇಗೊ? ಏನೊ? ಗೊತ್ತಿಲ್ಲ. ಆದರೆ ನನ್ನ ಮನ,ಭಾವಗಳನ್ನು

ಅವನಿಗೆ ಕೊಟ್ಟು ಬಿಟ್ಟಿದ್ದೇನೆ. ನನ್ನ ತನು ಅವನ ಕಾತುರದಲ್ಲಿ ಕಳವಳಿಸಿದೆ. ಚೆನ್ನಮಲ್ಲಿಕಾರ್ಜುನನ ಬಗೆಗೆ ಯಾರು ಏನೆ ಹೇಳಲಿ ನಾನು ಮಾತ್ರ ಅವನನ್ನು ಬಿಡುವುದಿಲ್ಲ. ಅವನು ನನಗೆ ಬೇಕು. ಇದು ಇಂದಿನ ಯುವ ಜನಾಂಗ ಪ್ರೀತಿಯನ್ನು ತನ್ನ ಸಂಗಾತಿಗೆ ಕೊಟ್ಟ ಮೇಲೆ ಆ ಪ್ರೀತಿಯೆ ಬೇಕೆಂದು ಹಠ ಹಿಡಿಯುವಂತೆ ಅಕ್ಕನವರು ಚೆನ್ನಮಲ್ಲಿಕಾರ್ಜುನನಿಗಾಗಿ ಹಠ ಹಿಡಿದಿದ್ದಾರೆ.ಯುವಕರ ಪ್ರೀತಿ ಕೆಲವು ಸಲ ತಿಳಿವಳಿಕೆಯ ಕೊರತೆಯಿಂದ ಕೂಡಿರುತ್ತದೆ. ಅಲ್ಲಿ ಭಾವಾವೇಗವಷ್ಟೆ ಇರುತ್ತದೆ. ಜೊತೆಗೆ ತಾರುಣ್ಯದ ಅಮಲು ಬಹಳವಾಗಿರುತ್ತದೆ. ಅಲ್ಲಿ ವಿವೇಕದ ಅಂಶ ತುಂಬ ಕಡಿಮೆ ಇರುತ್ತದೆ. ಇಲ್ಲಿ ಹಾಗಲ್ಲ. ಅಕ್ಕಮಹಾದೇವಿಯವರು ಈಗ ಪರಮಾತ್ಮ ಪರಬ್ರಹ್ಮ ಎಂದು ತಿಳಿದಿದ್ದಾರೆ. ಅನುಭಾವದ ರುಚಿ ಈಗ ಅವರಿಗೆ ಬಹಳ ಇಷ್ಟವಾಗಿದೆ. ಆ ಆನಂದಕ್ಕೆ ಇನ್ನೊದು ಹೋಲಿಕೆಯಿಲ್ಲದಿರುವ ಹೆಚ್ಚುಗಾರಿಕೆಯನ್ನು

ಅವರು ಅನುಭವಿಸಿದ್ದಾರೆ.

: 1)ನೆಲದ ಮರೆಯ ನಿಧಾನದಂತೆ
ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ
ಫಲದ ಮರೆಯ ರುಚಿಯಂತೆ
ಭಾವದ ಮರೆಯ ಬ್ರಹ್ಮವಾಗಿಪ್ಪ
ಚೆನ್ನಮಲ್ಲಿಕಾರ್ಜುನನ ನಿಲವನಾರರಿಯರು.

ಪದಗಳ ಅರ್ಥ

ಮರೆ-ಅಡ್ಡ ತಡೆ
ನಿಧಾನ-ನಿಧಿರಾಜರು, ಶ್ರೀಮಂತರು,ಜನರು,ತಮ್ಮತಮ್ಮಕಷ್ಟ ಕಾಲಕ್ಕೆ ಬೇಕೆಂದು ಬಚ್ಚಿಟ್ಟಿರುವ ನಿಧಿ. ಹೇಮ-ಚಿನ್ನ
.ತಿಲ-ಎಳ್ಳು, ತೈಲ-ಎಣ್ಣೆ,
ಫಲ-ಹಣ್ಣು ,ಫಸಲು.
ರುಚಿ-ಸ್ವಾದ.
ಸಿಹಿ-ಸವಿ.
ಭಾವ-ಜೀವನ ಮನೋಕೋಶ,ನಾನುದೇಹಧರಿಸಿದ ಜೀವಾ ಕೃನೆಂಬಭಾವ.
ಬ್ರಹ್ಮ-ಪರವಸ್ತು, ನಿಲವು-ಇರುವಿಕೆ,

ಸ್ವರೂಪ,ಚೆನ್ನಮಲ್ಲಿಕಾರ್ಜುನ-ಅಕ್ಕಮ 'ಹಾದೇವಿಯವರವಚನಾಂಕಿತ, ಶ್ರೀಶೈಲದ ಮಲ್ಲಿಕಾರ್ಜುನದೇವಾಲಯದಲ್ಲಿರುವ ಶಿವಲಿಂಗದ ಹೆಸರು

ಇಲ್ಲಿ ಅಕ್ಕಮಹಾದೇವಿಯವರುಗುರುವಿನಮೂಲಕ ದೀಕ್ಷೆ ಪಡೆದುಕರಸ್ಥಲದಲ್ಲಿ ಇಷ್ಟಲಿಂಗವಾಗಿಪೂಜಿಸುತ್ತಿರುವ ದೇವರ ನಿರಾಕಾರರೂಪ.ಚೆನ್ನ ಎಂದರೆ ಚನ್ನಾದ, ಒಳ್ಳೆಯ, ಮಲ್ಲಿಕಾರ್ಜುನ-ಮಲ್ಲಿಕ,ಅರ್ಜುನ ಮಲ್ಲಿಗೆಯಂತೆ ಬೆಳ್ಳಗೆ ಬೆಳಕಾಗಿ ಇರುವವನು.

## ವಚನದ ಅರ್ಥ

ಅಕ್ಕಮಹಾದೇವಿಯವರು ಈ ವಚನದಲ್ಲಿ ಪರಮಾತ್ಮನ ಸ್ವರೂಪವನ್ನು ಸರಳದಲ್ಲಿ ತಿಳಿಯಲು ಸಾಧ್ಯವಿಲ್ಲೆಂದು ಹೇಳಿದ್ದಾರೆ. ಹಾಗೆ ವಿವರಿಸುತ್ತಲೇ ಇಂತಹ ಪರಮಾತ್ಮನ ಇರುವಿಕೆಯು ಜಗತ್ತಿನಲ್ಲಿ ಹೇಗಿದೆ ಎಂಬುದನ್ನು ಐದು ಉಪಮೆಗಳ ಮೂಲಕ ವಿವರಿಸಿ ದ್ದಾರೆ. ಈಗ ಉಪಮೆಗಳ ಅರ್ಥವನ್ನು ತಿಳಿಯೋಣ. ನೆಲದ ಮರೆಯ ನಿಧಾನದಂತೆ,ನೆಲ ದಲ್ಲಿ ಹೂತಿಟ್ಟಿರುವ ಸಂಪತ್ತಿನಂತೆ ಪರಮಾತ್ಮನು ಅವ್ಯಕ್ತವಾಗಿದ್ದಾನೆ. ಭೂಮಿಯಲ್ಲಿ ನಿಧಾನ ಇದೆ. ಆದರೆ ಅದು ಎಲ್ಲರಿಗೂ ತಿಳಿದಿರುವುದಿಲ್ಲ. ಯಾರು ನಿಧಿಯನ್ನು ಹೂತಿಟ್ಟಿರುತ್ತಾರೊ ಅವರಿಗೆ ಮಾತ್ರ ಗೊತ್ತು. ಉಳಿದಿರುವವರಿಗೆ ತಿಳಿದಿರುವುದಿಲ್ಲ. ಶಿಲೆಯ ಮರೆಯ ಹೇಮ ದಂತೆ.ಗಣಿ, ಬಂಡೆ, ಶಿಲಾಪದರ, ಮಣ್ಣು ಇವುಗಳಲ್ಲಿ ಬಂಗಾರ ಇದೆ. ಆದರೆ ಅದನ್ನು ಪಡೆ ದುಕೊಳ್ಳಬೇಕಾದರೆ ಆ ಗೊತ್ತಿರುವ ಕ್ರಮದಲ್ಲಿ ಪ್ರಯತ್ನ ಮಾಡಬೇಕು. ಆಗ ಮಾತ್ರ ಚಿನ್ನ ದೊರೆಯುತ್ತದೆ. ಹಾಗೆ ಸೃಷ್ಟಿಯಲ್ಲಿ ಅಗೋಚರವಾಗಿರುವ ದೇವರನ್ನು ಕಾಣಬೇಕಾದರೆ ಅನುಭಾವ ಮಾರ್ಗದಲ್ಲಿ ಸಾಧನೆಮಾಡಬೇಕು. ತಿಲದಮರೆಯ ತೈಲದಂತೆ. ಎಳ್ಳಿನಲ್ಲಿ ಎಣ್ಣೆ ಇದೆ ಆದರೆ ಗಾಣಕ್ಕೆ ಹಾಕಿ ಆ ಕ್ರಮದಲ್ಲಿ ಪ್ರಯತ್ನ ಮಾಡಿದಾಗ ಮಾತ್ರ ಎಳ್ಳಿನಲ್ಲಿರುವ ಎಣ್ಣೆ ದೊರೆಯುತ್ತದೆ. ಹಾಗೆಯೇ ಅವ್ಯಕ್ತವಾಗಿರುವ ದೇವರು ಆಧ್ಯಾತ್ಮಸಾಧನೆಯಿಂದ ಅನು ಭಾವಕ್ಕೆ ದೊರೆಯುತ್ತಾನೆ. .ಫಲದ ಮರೆಯ ರುಚಿಯಂತೆ, ಹಣ್ಣು ಫಸಲುಗಳಲ್ಲಿ ರುಚಿ ಸಿಹಿ ಸ್ವಾದ, ಅನ್ನದಸತ್ವ ಇದೆ. ಹಣ್ಣು ಬಿಟ್ಟುಸಿಹಿ, ಸವಿಯಿಲ್ಲ. ಹಾಗೆಪರಮಾತ್ಮ ಬಿಟ್ಟು ಜಗತ್ತಿಲ್ಲ. ಜಗತ್ತು ಪರಮಾತ್ಮ ಸಂಬಂಧ ಹಣ್ಣು ಸಿಹಿಯ ಸಂಬಂಧದಂತೆ ಅವಿನಾಭಾವ ಸಂಬಂಧ ಉಳ್ಳುದು.ಭಾವದ ಮರೆಯಬ್ರಹ್ಮವಾಗಿಪ್ಪ ಚೆನ್ನಮಲ್ಲಿಕಾರ್ಜುನನ ನಿಲವನಾರೂ ಅರಿಯಬಾರದು. ಭಾವವು ದೇಹಧಾರಿಗಳಾದ ಜೀವರುಗಳಿಗಿದೆ. ಮನುಷ್ಯನಲ್ಲಿರುವ ಈ ಜೀವ ಚೈತನ್ಯಭಾವವು ದೇಹದಿಂದಾದುದಾಗಿದೆ. ಈ ದೇಹವು ಬ್ರಹ್ಮಸೃಷ್ಟಿಯಿಂದಾದದ್ದು.ನಾವು ದೇಹ ಧಾರಿಗಳು. ಜನನ ಮರಣವು ದೇಹಕ್ಕೆ ಇದೆ. ದೇಹಕ್ಕೆ ಮೂಲವಾಗಿರುವ ಪ್ರಾಣ ಚೈತನ್ಯಕ್ಕೆ ಜನನ ಮರಣ ಇಲ್ಲ. ಈ ಪ್ರಾಣ ಚೈತನ್ಯಕ್ಕೆ ದೇಹ ಒಂದು ಮಾಧ್ಯಮ. ಈ ದೇಹವು ನಾಶವಾಗುತ್ತದೆ. ಆದರೆ ನಾವು ಇದನ್ನು ಶಾಶ್ವತ ಎಂದೆ ತಿಳಿದಿದ್ದೇವೆ. ದೇಹ ಹೋದರೆ ನಾನು ಹೋದಂತೆ ಎಂದು ಭಾವಿಸಿದ್ದೇವೆ. ಈ ದೇಹ ಕಾರಣನಾದ ಜೀವನಿಗೆ ಬ್ರಹ್ಮದ ಭಾವವಿಲ್ಲ.ಇವನಿಗೂ, ನಾನು ದೇಹ, ನಾನು ಇಂತಹವರ ಮಗ,ನಾನಿಷ್ಟು ಶ್ರೀಮಂತ ಇತ್ಯಾದಿ ಭಾವಗಳೇ ಇವೆ. ಇದರಿಂದ ಅವಿನಾಶಿಯೂ, ಚಿರಂತನವೂ ಆದ ಆತ್ಮದ ಅರಿವಾಗಿಲ್ಲ. ನನ್ನನ್ನೇ ನಾನು ತಿಳಿಯ ದಂತೆ ದೇಹಭಾವ ಒಂದು ಅಡ್ಡಿಯಾಗಿದೆ. ಹಾಗೆಯೇ ಪರಮಾತ್ಮನನ್ನು ದರ್ಶನ ಮಾಡಿಕೊಳ್ಳಲು ನಾನು ದೇಹವೆಂಬ ಅಜ್ಞಾನ ಭಾವವೇ ಕಾರಣವಾಗಿದೆ.ಆದುದರಿಂದ ನಾವು ಯಾರೂ ಚೆನ್ನಮಲ್ಲಿಕಾರ್ಜುನದೇವರನ್ನು ತಿಳಿಯಲಾರದವರಾಗಿದ್ದೇವೆ. ಚೆನ್ನಮಲ್ಲಿಕಾರ್ಜುನ ಎಂದು ಅಕ್ಕಮಹಾದೇವಿಯವರು ತಮ್ಮ ಇಷ್ಟಲಿಂಗಕ್ಕೆ ಪರಮಾತ್ಮನ ಹೆಸರಿಟ್ಟು ಕರೆದಿದ್ದಾರೆ. ಶ್ರೀ ಶೈಲದಚೆನ್ನಮಲ್ಲಿಕಾರ್ಜುನ ದೇವರನ್ನು ಮನೆಯದೇವರೆಂದು ತಂದೆತಾಯಿಗಳು ಮಗಳಿಗೆ ತಿಳಿಸಿದ್ದಾರೆ. ಬಾಲ್ಯಕಾಲದಲ್ಲಿ ಅಕ್ಕನವರು ತಮ್ಮಾ ಆರಾಧ್ಯದೇವರೆಂದು ಭಕ್ತಿ ಮಾಡಿದರು. ಗೌರಿದೇವಿಯರು ಶಿವನನ್ನು ತಪಸ್ಸು ಮಾಡಿ ಪತಿಯನ್ನಾಗಿ ಪಡೆದಂತೆ ನಾನೂ ತಪಸ್ಸು ಮಾಡಿ ಪಡೆಯಬಹುದೆಂದು ಭಕ್ತಿ ನಡೆಸಿದರು. ಅವರು ಸಾವ ಕೆಡುವ ಗಂಡರನ್ನು ಒಲೆ ಯೊಳಗಿಕ್ಕೆಂದು ತನ್ನನ್ನು ವಿವಾಹವಾಗಲು ಬಯಸಿ ಬಂದ ಮಹಾರಾಜನಿಗೆ ಹೇಳಿ ಅನು ಭಾವ ಜೀವನಕ್ಕೆ ಪದಾರ್ಪಣ ಮಾಡಿದರು. ಚೆನ್ನಮಲ್ಲಿಕಾರ್ಜುನನು ಕೈಲಾಸದಲ್ಲಿದ್ದಾನೆ ಅವನನ್ನು ನಾನೂ ಪಡೆಯಬಹುದೆಂದು ನಂಬಿದ್ದರು. ಅವರು ಆಧ್ಯಾತ್ಮಜೀವನಕ್ಕೆ ಬಂದು ಶ್ರೀ ಶೈಲದಲ್ಲಿ ಸಾಧನೆ ಮಾಡಿದ ಮೇಲೆ ದೇವರು ಯಾರು? ಅವನ ಸ್ವರೂಪ ಏನು ಎನ್ನುವ ಸತ್ಯದ ಸಾಕ್ಷಾತ್ಕಾರವನ್ನು ಅವರು ಪಡೆದುಕೊಂಡರು. ಚೆನ್ನಮಲ್ಲಿಕಾರ್ಜುನ ಎಂದರೆ ಮಲ್ಲಿಗೆಯಂತೆ ಬೆಳ್ಳನೆ ಬೆಳಕಾಗಿ ಜಗವನ್ನೆಲ್ಲ ಬೆಳಗುವವನು. ಜೀವಜಾಲವನ್ನೆಲ್ಲ ಸೃಷ್ಟಿಸಿಅವುಗಳಿಗೆ ಮೂಲಾಧಾರವಾಗಿರುವ ನಿರಾಕಾರ

ಚೈತನ್ಯ ಎಂದು ಸಾಕ್ಷಾತ್ಕಾರ ಮಾಡಿಕೊಂಡರು. ಈ ತಪಸ್ಸು, ದರ್ಶನ ಸಾಕ್ಷಾತ್ಕಾ ರವಾದುದು.ಶ್ರೀ ಶೈಲದಲ್ಲಿ ಅಲ್ಲಿ ಅವರು ಹತ್ತು ವರ್ಷಗಳ ಕಾಲ ತಪಸ್ಸು ನಡೆಸಿ ಸಾಕ್ಷಾತ್ಕಾರ ಮಾಡಿಕೊಂಡರು.

**2)ನಾಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು.**
**ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು.**
**ಅಜ್ಞಾನ ಹುಟ್ಟಿದಲ್ಲಿ ಆಶೆ ಹುಟ್ಟಿತ್ತು**
**ಆಶೆ ಹುಟ್ಟಿದಲ್ಲಿ ಕೋಪ ಹುಟ್ಟಿತ್ತು.**
**ಆ ಕೋಪಾಗ್ನಿಯ ತಾಮಸ ಧೂಮ್ರ ಮುಸುಕಿನಲಿ ನಾ ನಿಮ್ಮ ಮರೆದು ಭವದು:ಖಕ್ಕೀಡಾದೆ**
**ನೀ ಕರುಣದಿಂದೆತ್ತಿ ಎನ್ನ ಮರಹ ವಿಂಗಡಿಸಿ**
**ನಿಮ್ಮ ಪಾದನರುಹಿಸಯ್ಯ ಚೆನ್ನಮಲ್ಲಿಕಾರ್ಜುನಾ.**

## ಪದಗಳ ಅರ್ಥ

ತಾಮಸ-ತಾಮಸ,ಗುಣತ್ರಯಗಳಲ್ಲಿ ಕನಿಷ್ಠವಾದುದು.
ಧೂಮ್ರ- ಹೊಗೆ, ಹೊಗೆ ಕವಿದುನೋಟವೂ ಇಲ್ಲ. ಉಸಿರಾಟವೂ ಇಲ್ಲ. ಅಷ್ಟುಕಷ್ಟ ಜೀವನ. ಅರಿವಿನ ನಷ್ಯ
ಭವ-ಹುಟ್ಟು,ಸಾವು,
ಮರಹು-ಅಜ್ಞಾನ
ಅರುಹಿಸು-ದರ್ಶನಮಾಡಿಸು.

## ವಚನದ ಅರ್ಥ

ಈವಚನವು ವೈಜ್ಞಾನಿಕ ಮನೋವಿಶ್ಲೇಷಣೆಯಿಂದ ಕೂಡಿದೆ. ಮನುಷ್ಯನ ಹುಟ್ಟಿನಿಂದ ಹಿಡಿದು ಸಾವಿನ ತನಕ ವಿವಿಧನೆಲೆಗಳಲ್ಲಿ ನಾವು ಸಿಕ್ಕಿಬೀಳುತ್ತೇವೆ.
ಬುದ್ಧ ತಪಸ್ಸು ಮಾಡಿ ಆಶೆಯೇ ದು:ಖಕ್ಕೆ ಕಾರಣ ಎಂದು ಹೇಳಿದ.
ಇಲ್ಲಿ ಅಕ್ಕಮಹಾದೇವಿಯವರು ಮನುಷ್ಯನ ಮನಸ್ಸುಹೇಗೆ ಬೇರೆ ಬೇರೆ ಪ್ರಭಾವಕ್ಕೆ ಒಳಗಾಗುತ್ತದೆ,ಯಾವಯಾವ ಭಾವಗಳು ಹುಟ್ಟುತ್ತವೆ. ಅವು ಹೇಗೆ ಅವನನ್ನು ಮುಗಿಸುತ್ತವೆ ಎಂಬುದನ್ನು ಮನೋವಿಶೇಷಣೆಯ ಮೂಲಕ ತುಂಬ ಸುಂದ ರವಾಗಿ ವಿವರಿಸಿದ್ದಾರೆ.ಈ ಮನೋವಿಶ್ಲೇಷಣೆ ತುಂಬ ಹೊಸತು.ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು ..ಎಲ್ಲಿ ದೇಹ ಬಂತು ಅಲ್ಲಿ ನಾನುಬಂತು.
ನಾನುಬರುತ್ತಿದ್ದಂತೆಯೇ ಸಂಸಾರವೂ ಜೊತೆಜೊತೆಗೆ ಬಂತು.ಸಂಸಾರ ಎಂದರೇನು?ದೇಹ ಕಾರಣವಾಗಿ ಹಸಿವು,ತೃಷೆನಿದ್ರೆ,ಮೈಥುನ,ಇಂದ್ರಿಯಗಳ ಸಂಬಂಧ. ರಾಗ,ದ್ವೇಷ ಅರಿಷಡ್ವರ್ಗಗಳ ಉಪಟಳ,ಮನೆ,ಮಡದಿ,ಮಕ್ಕಳು, ಆಸ್ತಿ ಹೀಗೆ ಅಚಿರವಾದ ಎಲ್ಲ ಸಂಬಂಧಗಳು ಹುಟ್ಟಿ. ಕೊಂಡವು, ಆತ್ಮ ಒಂದು ಇದ್ದದ್ದು ಅನೇಕ ಸಂಬಂಧಗಳನ್ನು ಕಟ್ಟಿಕೊಳ್ಳುತ್ತಹೋಯಿತು. ಇವೆಲ್ಲವೂ ನಮ್ಮನ್ನು ಬಲವಾಗಿ ಭವಕ್ಕೆ ಕಟ್ಟಿಹಾಕುತ್ತವೆ. ಈ ಸಂಬಂಧಗಳು ಒಂದು ನೂರು ಲಕ್ಷ ಕೋಟಿಯಾಗಿ ಬೆಳೆಯುತ್ತವೆ. ಇದು ಸಂಸಾರ. ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು. ಎಲ್ಲಿಸಂಸಾರದ ಜನನ ಆಯಿತು. ಅಲ್ಲಿ ಅಜ್ಞಾನವೂ ಜೊತೆಜೊತೆಗೆಬಂತು. ಸಂಸಾರವುಬೇಕು ಬೇಕು ಎನ್ನುವ ದಾಹ ಹುಟ್ಟಿಸಿತು. ಈ ಕೆಲಸ ಕೊನೆ ಮೊದಲಿಲ್ಲದ್ದು. ಇದು ಮುಗಿಯುವುದೂ ಇಲ್ಲ.ಕರಗುವುದೂ ಇಲ್ಲ. ಹೆಚ್ಚುತ್ತ ಹೋಗುತ್ತದೆ.ಅಜ್ಞಾನ ಹುಟ್ಟಿದಲ್ಲಿ ಆಶೆಹುಟ್ಟಿತ್ತು. ಆಶೆಯ ಉದಯಕ್ಕೆ "ಅಜ್ಞಾನವೆ ಕಾರಣ.ಯಾರಲ್ಲಿ ಹೆಚ್ಚು ಆಶೆಗಳಿವೆ ಅವರು ಹೆಚ್ಚು ಅಜ್ಞಾನಿಗಳಾಗಿರುತ್ತಾರೆ. ಅರಿವು ಹೆಚ್ಚಾದರೆ ಮರೆವುಕಡಿಮೆಯಾಗುತ್ತ ಹೋಗುತ್ತದೆ. ಆಗ ಆಶೆಯೂ ಕಡಿಮೆಯಾಗುತ್ತದೆ.ಮಕ್ಕಳಾಗಿದ್ದಾಗ ಏನೆಲ್ಲ ನಮಗೆ ಆಟದ ವಸ್ತುಗಳು ಬೇಕು. ದೊಡ್ಡವರಾದ ಮೇಲೆ ಅವುಗಳ ಆಶೆ ಹೋಗುತ್ತದೆ ಮಕ್ಕಳಿಗೆ ಕೇಳಿದ್ದು ಸಿಗದೆ... ಹೋದರೆ ಅವುಗಳಿಗೆ ಸಿಟ್ಟು ಬರುತ್ತದೆ. ಅತ್ತುರಂಪ ಮಾಡುತ್ತವೆ. ಆಶೆಯ ಜೊತೆಗೆ ಕೋಪವೂ ಜೊತೆ ಜೊತೆಯಾಗಿ ಬಂತು ನಾವು ಬಯಸಿದ್ದು ನಮಗೆ ಸಿಗದಿದ್ದರೆ ಅಸಾಧ್ಯ ಕೋಪ ಬರುತ್ತದೆ ಕೋಪದ ಪರಿಣಾಮ ಏನು? ಅಕ್ಕನವರು ಮುಂದೆ : ವಿವರಿಸಿದ್ದಾರೆ: ಆ

ಕೋಪಾಗ್ನಿಯ ತಾಮಸಧೂಮ್ರ ಮುಸುಕಿನಲಿ ನಾನಿಮ್ಮ ಮರೆದು. ಭವ ದು;ಖಿಕ್ಕೀಡಾದೆ.ಕೋಪ ತಾಮಸಗುಣದ ಲಕ್ಷಣ. ಅವಿವೇಕದ ಪರಮಾವಧಿ..ಈ. ಕೋಪ ಹೆಚ್ಚಿದಷ್ಟೂ, ಅವಿವೇಕ ಹೆಚ್ಚಿ ವಿವೇಶ ನಷ್ಟವಾಗುತ್ತದೆ. ಆಗ ನಮಗೆ ನಮ್ಮ ವ್ಯಕ್ತಿತ್ವದ ಮರೆವು ಉಂಟಾಗುತ್ತದೆ. ಆತ್ಮಸತ್ಯ ಎನ್ನುವ ವಿವೇಕ ಹೋಗುತ್ತದೆ: ದೇಹವೇ ಸತ್ಯ ಎಂಬಭ್ರಮೆ ಹುಟ್ಟುತ್ತದೆ, ಪರಮಸತ್ಯವನ್ನು ಮರೆತು ಬಿಡುತ್ತೇವೆ. ರಾಗಭೋಗಗಳು ಹೆಚ್ಚುತ್ತವೆ.ಇದರಿಂದ ದುಃಖ ಹೆಚ್ಚುತ್ತದೆ.ಈ ಸಂಸಾರವು ನಮ್ಮನ್ನು ದುಃಖಕ್ಕೆ ತಳ್ಳಿ ಬಿಡುತ್ತದೆ. ಇದರಿಂದ ನಮಗೆ ಹುಟ್ಟು ಸಾವು ನಿತ್ಯವಾಗುತ್ತದೆ. ಪರಮಾತ್ಮನೇ ನಾನು ನಿನ್ನಲ್ಲಿ ಬೇಡುತ್ತಿದ್ದೇನೆ. ನೀ ಕರುಣದಿಂದೆತ್ತಿ ಎನ್ನ ಮರಹ ಪಿಂಗಡಿಸಿ, ನಿಮ್ಮಪಾದನರುಹಿಸಯ್ಯ ಚನ್ನಮಲ್ಲಿಕಾರ್ಜುನ ಪರಮಾತ್ಮನೇ ನೀನು ಕರುಣದಿಂದ ನೋಡು ಒಂದಿಷ್ಟು ದಯೆ ತೋರು ನನ್ನ ಮರಹನ್ನು ಹೋಗಲಾಡಿಸು.. ನನ್ನ ಮರಹುಗಳು ಒಂದೆ ಎರಡೆ, ಅವನ್ನು ದೂರಮಾಡು, ನಿನ್ನ ದರ್ಶನ ಭಾಗ್ಯ ವನ್ನು ನೀಡು. ಸತ್ಯದ ಸಾಕ್ಷಾತ್ಕಾರದ ಹಂಬಲ ಇಲ್ಲಿದೆ... ಈವಚನದ ಲಯ, ಭಾವ ಗೀತಾತ್ಮಕ ಶಕ್ತಿ, ರೂಪಕಚಿತ್ರ, ವಿಶ್ಲೇಷಣೆ ಅಮೋಘ ವಾಗಿದೆ.

**3) ನೀರ ಕ್ಷೀರದಂತೆ ನೀನಿಪ್ಪೆಯಾಗಿ**
**ಆವುದು ಮುಂದು ಆವುದು ಹಿಂದು ಎಂದರಿಯೆ.**
**ಆವುದು ಕರ್ತೃ? ಆವುದು ಬೃತ್ಯನೆಂದರಿಯೆ.**
**ಆವುದು ಘನ ಆವುದು ಕಿರಿದೆಂದರಿಯೆ**
**ಚೆನ್ನಮಲ್ಲಿಕಾರ್ಜುನಯ್ಯಾ,**
**ನೀನೊಲಿದು ಕೊಂಡಾಡಿದಡೆ ಇರುಹೆ ರುದ್ರನಾಗದೆ ಹೇಳಾಯ್ಯಾ?**

ಪದಗಳ ಅರ್ಥ

ಕರ್ತೃ-ಒಡೆಯ,
ನೃತ್ಯ-ಸೇವಕ,
ಒಲಿದು-ಭಕ್ತಿಮಾಡಿ,
ಕೊಂಡಾಡು-ಪ್ರಾರ್ಥಿಸು,
ಇರುವೆ-ಪುಟ್ಟಕ್ರಿಮಿ,
ರುದ್ರ-ದೊಡ್ಡದು, ಪರಮಾತ್ಮ.

ವಚನದ ಅರ್ಥ

ನೀರ ಕ್ಷೀರದಂತೆ ನೀನಿಪ್ಪೆಯಾಗಿ ಆವುದು ಮುಂದು ಆವುದು ಹಿಂದು ಅರಿಯೆನಯ್ಯ.ನೀರು ಹಾಲು ಕೂಡಿದಾಗ ಹೇಗಿರುವುದೊ ಹಾಗೆ ಜಗತ್ತಿನ,ಪರಮಾತ್ಮನ ಸಂಬಂಧವಿದೆ. ಇಲ್ಲಿ ಮುಂದು ಯಾವುದು ಹಿಂದು ಯಾವುದು ತಿಳಿಯುವು ದಿಲ್ಲ. ಆವುದು ಕರ್ತೃ ಆವುದು ನೃತ್ಯ ಅರಿಯೆನಯ್ಯ. ಯಾವುದು ಒಡೆಯ ಯಾವುದು ತೊತ್ತು,ಯಾವುದು ಮೂಲ, ಯಾವುದು ಅಧೀನ ನನಗೆ ತಿಳಿಯದು. ಆವುದು ಹಿರಿದು ಆವುದು ಕಿರಿದು ಅರಿಯೆನಯ್ಯ. ದೊಡ್ಡದು ಯಾವುದು ಸಣ್ಣದು ಯಾವುದು ನನಗೆ ತಿಳಿಯದು. ನಿನ್ನನೊಲಿದುಕೊಂಡಾಡಿದರೆ ಇರುಹೆ ರುದ್ರನಾಗದೆ ಹೇಳಾ, ಪರಮಾತ್ಮನನ್ನು ಯಾರು ಕೊಂಡಾಡುತ್ತಾರೆ ಮನ, ಹೃದಯದಲ್ಲಿಟ್ಟು ಕೊಳ್ಳುತ್ತಾರೆ . ಅವರೂ ಪರಮಾತ್ಮನ ಆಗುತ್ತಾರೆ. ಭಕ್ತಿಯ ಪರಿಣಾಮ ಎಷ್ಟು ಹಿರಿದು? ಈವಚನದಲ್ಲಿ ವಿವರಿಸಿದ್ದಾರೆ. ಪೂಜಿಸುವುದರಿಂದಲೆ ಎಲ್ಲವೂ ಆಗುವುದಿಲ್ಲ ಪ್ರಯತ್ನವೂ ಬೇಕು. ಆ ದೃಢಭಕ್ತಿ ಅವರ ಅಂತರಂಗದಲ್ಲಿ ಇದೆ!. ನಿನ್ನಗೆ ಒಂದು ಇರುವೆ ಭಕ್ತಿ ಮಾಡಿದರೂ ಆ ಇರುವೆ ಕೂಡ ಪರಮಾತ್ಮ ಆಗಿಬಿಡುತ್ತದೆ ಆ ಭಾವ ದೊಡ್ಡದು. ಅಲ್ಪವನ್ನು ಬಿಟ್ಟು ಹಿರಿದನ್ನು ಪಡೆಯಬೇಕೆಂಬುದು ಅವರ ಗುರಿಯಾಗಿತ್ತು.

4) ನಿತ್ಯವೆನ್ನ ಮನೆಗೆ ನಡೆದುಬಂದಿತ್ತಿಂದು.
ಮುಕ್ತಿ ಎನ್ನ ಮನೆಗೆ ನಡೆದುಬಂದಿತ್ತಿಂದು.
ಜಯ ಜಯಾ, ಹರಹರಾ, ಶಂಕರ ಶಂಕರಾ,
ಗುರುವೆ ನಮೋ, ಪರಮಗುರುವೆ ನಮೋ.
ಚೆನ್ನಮಲ್ಲಿಕಾರ್ಜುನನ ತೋರಿದ ಗುರುವೆ ನಮೋ ನಮೋ.

ಪದಗಳ ಅರ್ಥ

ನಿತ್ಯ-ಪರತತ್ವ,, ಶಾಶ್ವತಸತ್ಯ,
ಮುಕ್ತಿ- ಮೋಕ್ಷ
ಪರಮಗುರು-ಪರತತ್ವ .

ವಚನದ ಅರ್ಥ

ನಿತ್ಯವೆನ್ನ ಮನೆಗೆ ನಡೆದು ಬಂದಿತ್ತು. ಮುಕಿಯೆನ್ನ ಮನೆಗೆ ನಡೆದು ಬಂದಿತ್ತು. ಗುರುಗಳಿಗೆ ನಿತ್ಯ ಮುಕ್ತಿ'ಯೆಂದು ಎರಡು ವಿಶೇಷಣಗಳನ್ನು ಬಳಸಿದ್ದಾರೆ. ಗುರು ನಿತ್ಯದ ರೂಪದಲ್ಲಿ ಮುಕ್ತಿಯರೂಪದಲ್ಲಿ ನಡೆದು ಬಂದಿದ್ದಾನೆ. ಜಯಜಯ ಶಂಕರ ಹರಹರ ಶಂಕರ ಗುರುವೆ ಪರಮಗುರುವೆ ನಮೋನಮೋ .ಗುರುವನ್ನು ಅಕ್ಕನವರಿಗೆ ಎಷ್ಟು ಗೌರವ ವಿಶೇಷಣಗಳಿಂದ ಕರೆದರೂ ತೃಪ್ತಿಯಿಲ್ಲ ಗುರುವನ್ನು ಪರಮ
ಗುರುವೆಂದು ಕರೆದಿದ್ದಾರೆ. ಚೆನ್ನಮಲ್ಲಿಕಾರ್ಜುನನ ತೋರಿದ ಗುರುವೆ ನಮೋ ನಮೋ. ಪರಮಾತ್ಮನನ್ನು ಪಡೆದುಕೊಳ್ಳುವ ಹಂಬಲ ಉಂಟು ಮಾಡಿದ ಗುರುಗಳಿಗೆ ಎಷ್ಟು ಗೌರವಿಸಿ ನೆನೆದರೂ ತೃಪ್ತಿಯಿಲ್ಲ.

5) ನರಜನ್ಮವ ತೊಡೆದು ಹರ ಜನ್ಮವ ಮಾಡಿದ ಗುರುವೆ ನಮೋ.
ಭವ ಬಂಧನವ ಬಿಡಿಸಿ ಪರಮಸುಖವ ತೋರಿದ ಗುರುವೆ ನಮೋ,
ಭವಿಯೆಂಬುದ ತೊಡೆದು ಭಕ್ತೆ ಎಂದೆನಿಸಿದ ಗುರುವೆ ನಮೋ,
ಚೆನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೆ ನಮೋ,

ಪದಗಳ ಅರ್ಥ
ನರಜನ್ಮ-ಹುಟ್ಟುಸಾವಿಗೊಳಗಾದ ಆತ್ಮ.
ಹರಜನ್ಮ-ಭಕ್ತಿ ಅನುಭಾವಕ್ಕೆ ಮೀಸಲಾದ ದೇಹ.
ಭವ-ಹುಟ್ಟು ಸಾವು.
ಬಂಧನ-ಹುಟ್ಟುಸಾವಿನ ಸಂಸಾರ ಚಕ್ರ,
ಪರಮ ಸುಖ-ಭಕ್ತಿ ಜ್ಞಾನ, ಆನಂದದ ಸುಖ.
ಭವಿ-ವೀರಶೈವ ಲಿಂಗಾಯತನಲ್ಲದವನು.

ವಚನದ ಅರ್ಥ

ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ ಹುಟ್ಟುಸಾವಿನಲ್ಲಿದ್ದವಳನ್ನು ಶಿವಪಥಕ್ಕೆ ಯೋಗ್ಯಳ ಮಾಡಿದ ಗುರುವೆ. ಭವಿ ಎಂಬುದ ತೊಡೆದು ಭಕ್ತ ಎಂದೆನಿಸಿದ ಗುರುವೆ . ಭಕ್ತಿಹೀನಳಾಗಿದ್ದವಳನ್ನು ಭಕ್ತಿವಂತಳನ್ನಾಗಿ ಮಾಡಿದ ಗುರುವೆ. ಚೆನ್ನ ಮಲ್ಲಿಕಾರ್ಜುನನ ತಂದೆನ್ನ ಕರಸ್ಥಲಕ್ಕೆ ಕೊಟ್ಟ ಗುರುವೆ. ಪರಮಾತ್ಮನನ್ನು ನಿತ್ಯ ಪೂಜಿಸಲು ದೀಕ್ಷೆ ಮೂಲಕ ಕರಸ್ಥಲಕ್ಕೆ ನೀಡಿದ ಗುರುವೆ ಶರಣು ಶರಣಾರ್ಥಿ. ಈವಚನದಲ್ಲಿ ದೀಕ್ಷೆಯ ಮೂಲಕ ಭಕ್ತನಿಗೆ ದೊರೆಯುವ ಧಾರ್ಮಿಕ, ಸಾಮಾಜಿಕ ನೆಲೆ ಗಳ ಎತ್ತರವನ್ನು ವಿವರಿಸಲಾಗಿದೆ. ನಾವುದೀಕ್ಷೆಯಿಂದ ಧರ್ಮವಂತರಾಗುತ್ತೇವೆ.

**6). ನಮಗೆ ನಮ್ಮ ಲಿಂಗದ ಚಿಂತೆ .ನಮಗೆ ನಮ್ಮ ಭಕ್ತರ ಚಿಂತೆ.**
**ನಮಗೆ ನಮ್ಮ ಆದ್ಯರ ಚಿಂತೆ ನಮಗೆ ಚೆನ್ನಮಲ್ಲಿಕಾರ್ಜುನಯ್ಯನ**
**ಚಿಂತೆಯಲ್ಲದೆ ಲೋಕದ ಮಾತು ನಮಗೇಕಣ್ಣ?**

ವಚನದ ಅರ್ಥ

ನಮಗೆ ನಮ್ಮ ಲಿಂಗದ ಚಿಂತೆ . ನಮಗೆ ನಮ್ಮ ಭಕ್ತರ ಚಿಂತೆ. ನಮಗೆ ನಮ್ಮ ಆದ್ಯರ ಚಿಂತೆ . ನನಗೆ ಪರಮಾತ್ಮನನ್ನು ಕಾಣುವ ಚಿಂತೆ . ಪರಮಾತ್ಮನನ್ನು ಪಡೆದುಕೊಂಡ ಭಕ್ತರನ್ನು ಕಾಣುವ ಚಿಂತೆ . ಹಿರಿಯ ಶರಣರ ದರ್ಶನ ಮಾಡುವ ಚಿಂತೆ .ನಮಗೆ ಚೆನ್ನಮಲ್ಲಿಕಾರ್ಜುನಯ್ಯನ ಚಿಂತೆಯಲ್ಲದೆ ಲೋಕದ ಮಾತು ನಮಗೇಕಣ್ಣ. ನನಗೆ ಪರಮಾತ್ಮನ ದರ್ಶನದ ವಿಚಾರ ಬಿಟ್ಟು ಇನ್ನೊಂದು ವಿಚಾರ ಇಲ್ಲ. ಹೀಗಿರುವಾಗ ಲೋಕ ಜನರು ನನ್ನ ಬಗ್ಗೆ ಏನು ಹೇಳಿದರು ಬಿಟ್ಟರು. ಅದರ ವಿಚಾರ ಬೇಡ . ಮಹಾದೇವಿಯವರು ಲಗ್ನವಾಗದೆ ಪರಮಾತ್ಮನನ್ನೆ ಗಂಡನನ್ನಾಗಿ ಪಡೆಯಬೇಕೆಂದು ಬಾಳಿದವರು. ರಾಜ ಅವರ ಬದುಕಿನಲ್ಲಿ ಧೂಮಕೇತುವಾದ. ಅನುಭಾವಿ
ಶರಣೆ,ಗುರುವಿಗೆ ಲೋಕದ ಜನರು ನಾನಾ ತರದ ಪ್ರಶ್ನೆಗಳನ್ನು ಕೇಳಿದರು. ನಿಮ್ಮ ಬಗ್ಗೆ ಜನರು ಏನೇನೊ ಮಾತನಾಡಿಕೊಳ್ಳುತ್ತಾರೆ ಎಂದು ಕೇಳಿದುದಕ್ಕೆ ಉತ್ತರ ಈ ವಚನ. ಚೆನ್ನಮಲ್ಲಿಕಾರ್ಜುನನ ಚಿಂತೆಯಲ್ಲೇ ಜೀವನ ಕಳೆದಿರುವ ಅಕ್ಕನವರಿಗೆ ಲೋಕದ ಮಾತುಗಳಿಂದ ಆಗಬೇಕಾದುದಾದರೂ ಏನು? ನಮಗೆ ದೇವರ ಚಿಂತೆ ನಮಗೆ ಭಕ್ತರ ಚಿಂತೆ. ನಮಗೆ ಮಹಾತ್ಮರ ಚಿಂತೆ.ಈಚಿಂತೆಯಲ್ಲದೆ ಲೋಕದ ಆಗದ ಹೋಗದ ಉಪಯೋಗವಿಲ್ಲದ ಮಾತು ತೆಗೆದುಕೊಂಡು ಆಗ ಬೇಕಾದುದಾದರೂ ಏನು?

**7) ನೋಡಿ ನುಡಿಸಿ ಮಾತನಾಡಿಸಿದಡೆ ಒಂದು ಸುಖ.**
**ಏನ ಮಾಡದಯ್ಯಾ ನಿಮ್ಮ ಶರಣರ ಅನುಭಾವ. ? ಚೆನ್ನಮಲ್ಲಿಕಾರ್ಜುನಯ್ಯಾನಿಮ್ಮ ಶರಣರ**
**ಸದೋಷ್ಠಿ ಏನ ಮಾಡದಯ್ಯಾ?**
**ನೋಡಿ ನುಡಿಸಿ ಮಾತನಾಡಿಸಿದರೆ ಒಂದು ಸುಖ**
**ಏನ ಮಾಡದಯ್ಯ ನಿಮ್ಮ ಶರಣರ ಅನುಭಾವ. ?**

ವಚನದ ಅರ್ಥ

ಶರಣರ ದರ್ಶನವೆ ಒಂದು ಭಾಗ್ಯ. ಅವರ ನಡೆನುಡಿಗಳಲ್ಲಿ ಸತ್ಯದ ದರ್ಶನ .ಒಂದು ಪುಣ್ಯ. ಅವರ ಜೊತೆ ಅನುಭಾವ ಏನೆಲ್ಲ ಆನಂದ, ಆಶ್ಚಯ್ಯ್ಗಳನ್ನು ತಂದು ಕೊಡುತ್ತದೆ ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ಸದ್ಯೋಷ್ಟಿ ಏನ ಮಾಡದಯ್ಯ. ಪರಮಾತ್ಮನೆ ನಿಮ್ಮ ಶರಣರ ಮಹಾನುಭಾವವ ಏನೆಲ್ಲ ಆನಂದಾತಿಶಯಗಳನ್ನು ತಂದುಕೊಡುತ್ತದೆ. ಶರಣರ ಮಹಾನುಭಾವಿಗಳ ಸಂಗಸುಖ, ಮಹಾನುಭಾವ, ಸದೋಷ್ಠಿಯ ಪರಿಣಾಮವನ್ನು ಕೊಂಡಾಡಲಾಗಿದೆ. ಮಹಾತ್ಮರ ಶ್ರೇಷ್ಠ ತೆ ನಮಗೆ ತಿಳಿಯಬೇಕಾದರೆ, ಲೌಕಿಕರ ವರ್ತನೆಗಳು ಹೇಗಿರುತ್ತವೆ? ಮಹಾತ್ಮರ ಗುಣ ಶೀಲಗಳು ಹೇಗಿರುತ್ತವ? ಹೋಲಿಸಿ ನೋಡಬೇಕು. ಲೌಕಿಕರ ಆಶೆ, ಅಪೇಕ್ಷೆಗಳು ಕ್ಷುದ್ರುವೂ ಅತಿಯೂ ಆಗಿರುತ್ತವೆ. ಅನುಭಾವಿಗಳಿಗೆ ಬೇಕುಬೇಡಗಳಿಲ್ಲ.ಲೌಕಿಕರ ಮಾತುಗಳು ದ್ವೇಷಾಸೂಯೆಗಳಿಂದ ಕೂಡಿರುತ್ತವೆ. ಮಹಾತ್ಮರಲ್ಲಿ ಮಾತುಗಳೆ ಕಡಿಮೆ.ಅವರ ಸದ್ಗುಣ, ನಡವಳಿಕೆಗಳು ನಮಗೆ ಮಾರ್ಗದರ್ಶನ ಮಾಡುತ್ತವೆ. ಅವರ ಕಡಿಮೆ ಮಾತುಗಳು ನಮ್ಮಜೀವನಕ್ಕೆ ಬೆಳಕಾಗುತ್ತವೆ. ನಮ್ಮ ದುಃಖದ ಮೂಲ ಗಳಿಗೆ ಅವರು ಉತ್ತರ ಕೊಡುತ್ತಾರೆ. ನಮ್ಮನ್ನು ಅವರ ಎತ್ತರಕ್ಕೆ ಕರೆದೊಯ್ಯುತ್ತಾರೆ. ನೋಡಿ,ನುಡಿಸಿ ಮಾತನಾಡಿಸಿದಡೆ ಒಂದು ಸುಖ. ಏನಮಾಡದಯ್ಯ ನಿಮ್ಮಶರಣರ ಅನುಭಾವ. ಶರಣರ ದರ್ಶನವೂ ಒಂದುಭಾಗ್ಯ. ಅವರ ಮಾತುಗಳು ಬೆಳಕು. ಶರಣರ ಅನುಭಾವವು ನಮ್ಮ ಜೀವನಕ್ಕೆ ಏನೆಲ್ಲ ಒಳಿತು ತಂದು ಕೊಡುತ್ತದೆ. ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ಸದ್ಯೋಷ್ಠಿ ಏನ ಮಾಡದಯ್ಯ? ಶರಣರು ಪ್ರತ್ಯಕ್ಷ ಪರಮಾತ್ಮರು, ಮಹಾತ್ಮರ ಸದ್ಯೋಷ್ಠಿಯಂತೂ ಅಮೃತತ್ವದ ಸವಿಯೂಟ. ಅಕ್ಕಮಹಾದೇವಿಯವರು ಶ್ರೀ ಶೈಲದಲ್ಲಿ ಶರಣರ ಸಿದ್ಧಪುರುಷರ, ಸಾಧು ಸಂತರು ಇವರ ಜ್ಯೋತೆಯಲ್ಲಿ ಚರ್ಚೆಯಲ್ಲಿ ಭಾಗವಹಿಸಿದ ವಚನ.

**8) ನೋಡುವ ಕಂಗಳಿಗೆ ರೂಪಿಂಬಾಗಿರಲು**
**ನೀವು ಮನ ನಾಚದೆ ಬಂದಿರಣ್ಣ**
**ಕೇಳಿದ ಶೋತ್ರದ ಸೊಗಸಿಗೆ ನೀವು ಮರುಳಾಗಿ ಬಂದಿರಣ್ಣ ನಾರಿಯೆಂಬ ರೂಪಿಂಗೆ ನೀವು ಮರುಳಾಗಿ ಬಂದಿರಣ್ಣ**
**ಮೂತ್ರವು ಬಿಂದು ಒಸರುವ ನಾಳವೆಂದು ಕಂಗಾಣದೆ ಬಂದಿರಣ್ಣ**
**ಬುದ್ಧಿಗೇಡಿತನದಿಂದ ಪರಮಾರ್ಥದ ಸುಖವ ಹೋಗಲಾಡಿಸಿ ಕೊಂಡು, ನರಕಹೇತುವೆಂದರಿಯದೆ ಮನ ಹೇಸದೆ ಬಂದಿರಣ್ಣ ಚೆನ್ನ ಮಲ್ಲಿಕಾರ್ಜುನನಲ್ಲದೆಮಿಕ್ಕಿನ ಪುರುಷರು**
**ಎನಗೆ ಸಹೋದರರು ಛೀ ಹೋಗಾ ಮರುಳೆ.**

ಪದಗಳ ಅರ್ಥ

ಹೇತು-ಕಾರಣ,
ಹೇಸದೆ-ಲಜ್ಜೆಗೆಡದೆ,
ಇಂಬು-ಹಿತ, ಸುಖ, ಚೆಂದ.
ನಾಳ-ಯೋನಿ.

ವಚನದ ಅರ್ಥ

ನೋಡುವ ಕಂಗಳಿಗೆ ರೂಪಿಂಬಾಗಿರಲು ನೀವು ಮನನಾಚದೆ ಬಂದಿರಣ್ಣ. ನೋಡುವ ಕಣ್ಣುಗಳಿಗೆ ಚೆಲುವು ಅನುರೂಪವಾಗಿ ಚೆಂದ ಕಾಣುತ್ತಿರಲು ನೀವು ಮನಸ್ಸಿನಲ್ಲಿ ಒಂದಿಷ್ಟೂ ನಾಚಿಕೆ ಯಿಲ್ಲದೆ ಬಂದಿರಿ. ಕೇಳಿದ ಶೋತ್ರದ ಸೊಗ ಸಿಗೆ ನೀವು ಮರುಳಾಗಿ ಬಂದಿರಣ್ಣ. ಕೇಳುವ ಕಿವಿಗಳಿಗೆ ದನಿ ಹಿತವಾಗಿ ಕೇಳಿಸಿತು ಎಂದು ನೀವು ಹುಚ್ಚರಾಗಿ ಬಂದಿರಿ, ನಾರಿಯೆಂಬ ರೂಪಿಂಗೆ ನೀವು ಮರುಳಾಗಿ ಬಂದಿರಣ್ಣ. ಹೆಣ್ಣು ಎನ್ನುವ ರೂಪು, ಚೆಲುವಿಗೆ ಮನಸೋತು ಹುಚ್ಚರಾಗಿ ಬಂದಿರಿ. ಮೂತ್ರವು ಬಂದು ಒಸರುವ ನಾಳವೆಂದು ಕಂಗಾಣದೆ ಬಂದಿರಣ್ಣ. ಇದು ಉಚ್ಚೆಯ ಬಚ್ಚಲು ಎಂದು ತಿಳಿಯದೆ, ಕಣ್ಣುಗೆಟ್ಟು ಮತಿಭ್ರಾಂತರಾಗಿ ಬಂದಿರಿ. ಬುದ್ಧಿಗೇಡಿತ ನದಿಂದ

ಪರಮಾರ್ಥದ ಸುಖವ ಹೋಗಲಾಡಿಸಿಕೊಂಡು ನರಕಹೇತುವೆಂದರಿಯದೆ ಮನ ಹೇಸದೆ ಬಂದಿರಣ್ಣ. ವಿವೇಕ ಕಳೆದುಕೊಂಡು ಪರಮಾರ್ಥದ ಆನಂದ ಬಿಟ್ಟು, ವಿಷಯಭೋಗವು ನರಕಕ್ಕೆ ದಾರಿ ಎಂದು ತಿಳಿದೂ ಅಸಹ್ಯ ಪಟ್ಟುಕೊಳ್ಳದೆ ನೀವು

ಬಂದಿರಿ. ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿನ ಪುರುಷರೆನಗೆ ಸಹೋದರರು  ಛೀ ಹೋಗಾ ಮರುಳೆ. ಚೆನ್ನಮಲ್ಲಿಕಾರ್ಜುನನನ್ನು ಹೊರತು ಪಡಿಸಿ ಉಳಿದವರೆಲ್ಲ ನನಗೆ ಸಹೋದರರು ಛೀ ಹೋಗಾ ಹುಚ್ಚ. ಅನುಭಾವಜೀವನ ಎಷ್ಟೊಂದು ಕಷ್ಟ ನೋಡಿರಿ. ಪರಮಾತ್ಮನೆ ಪತಿಯಾಗಬೇಕು ಎಂದು ಆಧ್ಯಾತ್ಮ ಜೀವನಕ್ಕೆ ಬಂದರೆ ಕಂಡ ಕಂಡವರೆಲ್ಲ ಲಗ್ನ ಮಾಡಿಕೊ ಎಂದು ಕಾಡತೊಡಗಿದ್ದಾರೆ. ಅನುಭಾವಜೀವನಕ್ಕೆ ಬಂದವರು ಕೂಡ ಎಚ್ಚರ ತಪ್ಪಿ ಲಗ್ನಮಾಡಿಕೊಳ್ಳುವೆ ಎಂದು ನಡತೆ ತಪ್ಪಿ ಕೇಳತೊಡಗಿದ್ದಾರೆ.ಇಂತಹವರಿಗೆ ಈ ವಚನ ಉತ್ತರ ಹೇಳಿದೆ. ನೋಡುವ ಕಂಗಳಿಗೆ ರೂಪಿಂಬಾಗಿರಲು ಮನ ನಾಚದೆ ಬಂದಿರಣ್ಣ. ನಿಮ್ಮ ನೋಟಕ್ಕೆ ನಾನುಚೆಲುವೆಯಾಗಿ ಕಾಣಬಂದೆ. ಕಣ್ಣು ತಪ್ಪು ಮಾಡಿದವು. ಆದರೆ ನಿಮ್ಮ ಮನ ವಿಚಾರ ಮಾಡಬೇಕಾಗಿತ್ತು. ನೀವು ನಾಚಿಕೆಯಿಲ್ಲದೆ ನೋಟ ತಪ್ಪಿ ಬಂದಿರುವಿರಿ. ನಿಮ್ಮ ಕಿವಿಗಳು ಕೂಡ ನಿಮ್ಮನ್ನು ದಾರಿತಪ್ಪಿಸಿದವು . ನನ್ನ ವಾಣಿ, ಕೀರ್ತಿ, ಪ್ರಸಿದ್ಧಿ, ನನ್ನತ್ತ ನಿಮ್ಮನ್ನು ಬರುವಂತೆ ಮಾಡಿದವು. ಆಗಲಾದರೂ ನಿಮ್ಮ ಮನ ವಿಚಾರ ಮಾಡ ಬೇಕಾಗಿತ್ತು. ಇಲ್ಲ ಕಿವಿಯ ಸೊಗಸಿಗೆ ನೀವು ಮರುಳಾದಿರಿ. ನಾನು ಹೆಣ್ಣು ಎನ್ನುವ ಕಾರಣಕ್ಕೆ ನೀವು ಆಕರ್ಷಿತರಾಗಿ ಬಂದಿರುವಿರಿ. ಮೂತ್ರವು ಬಿಂದು ಒಸರುವ ನಾಳವೆಂದು ಕಂಗಾಣದೆ ಮುಂದುಗೆಟ್ಟು ಬಂದಿರಣ್ಣ. ನೀವು ಏನು ಕಾರಣ ಈ ಇಂದ್ರಿಯಕ್ಕೆ ಮನ ಸೋತಿರಿ. ಅದು ಮೂತ್ರ ಒಸರುವ ನಾಳ. ಅಲ್ಲಿರುವುದು ಶರೀರಕ್ಕೆ ಬೇಡವಾದುದನ್ನು ಹೊರ ಹಾಕುವ ಒಂದು ದ್ವಾರ. ಇದಕ್ಕೆ ಮನ ಸೋತಿರೆ? ನಿವು ಬುದ್ಧಿಗೇಡಿಗಳು. ಪರಮಾರ್ಥದ ಸುಖವನ್ನು ದೂರ ಮಾಡಿಕೊಂಡು ನರಕ ಭಾಜನ ವಾಗಲು ಬಂದಿರುವಿರಿ . ಸಹೋದರನೆ ಹೇಳುವೆ ಕೇಳು .ಚೆನ್ನಮಲ್ಲಿಕಾ ರ್ಜುನನಲ್ಲದೆ ಉಳಿದವರೆಲ್ಲ ನನಗೆ ಸಹೋದರರು. ಛೀ ಹೋಗಾ ಮರುಳೆ. ಎಂಥ ಚಾಟಿ ಏಟಿನ ಮಾತುಗಳು, ಉರುಲು ಹಾಕಿಕೊಳ್ಳಬೇಕು. ಅಂತಹ ಚಾಟಿ ಏಟುಗಳು ಈ ಮಾತುಗಳು ಬುದ್ಧಿವಂತರಿಗೆ ಮಾತಿನ ಪೆಟ್ಟು ದಡ್ಡರಿಗೆ ದೊಣ್ಣೆ ಪೆಟ್ಟು ಎಂಬ ಗಾದೆ ಮಾತಿದೆ. ತಿಳಿದುಕೊಳ್ಳುವವರಿಗೆ ಇಷ್ಟು ಸಾಕು.

**9) ನಿಮ್ಮ ನಿಲುವಿಂಗೆ ನೀವು ನಾಚ ಬೇಡವೆ?**
**ಅನ್ಯರ ಕೈಯಲ್ಲಿ ಅಲ್ಲ ಎನಿಸಿಕೊಂಬ ನಡೆ ನುಡಿ ಏಕೆ?**
**ಅಲ್ಲ ಎನಿಸಿಕೊಂಬುದರಿಂದ, ಆ ಕ್ಷಣವೆ ಸಾವುದು ಲೇಸು ಕಾಣಾ ಚೆನ್ನಮಲ್ಲಿಕಾರ್ಜುನಾ.**

ವಚಪದ ಅರ್ಥ

ನಿಮ್ಮ ನಿಲವಿಂಗೆ ನೀವು ನಾಚಬೇಡವೆ? ಅನ್ಯರ ಕೈಯಲ್ಲಿ ಅಲ್ಲ ಎನಿಸಿಕೊಂಬುದ ಕ್ಕಿಂತ ಸಾವುದು ಲೇಸು. ನಿಮ್ಮ ವ್ಯಕಿತ್ವಕ್ಕಾದರೂ ನೀವು ಹೆದರಬೇಕು.ನಾಚಿಕೊಳ್ಳ ಬೇಕು. ಬೇರೆಯವರ ಕೈಲಿ ಹೇಳಿಸಿಕೊಳ್ಳುವುದಕ್ಕಿಂತ ಸಾಯುವುದು ಒಳ್ಳೆಯದು. ಹೊರ ಜಗತ್ತಿಗೆ ತಾರುಣ್ಯದ ಹೆಣ್ಣುಮಕ್ಕಳು ಬಂದಾಗ ಲೊಕದ ಗಂಡಸರು ಎಷ್ಟು ಹದ್ದುಮೀರಿ ವರ್ತಿಸುತ್ತಾರೆಂಬುದಕ್ಕೆ ಇಂತಹ ವಚನಗಳು ಸಾಕ್ಷಿ. ವೈರಾಗ್ಯ,ಜ್ಞಾನ, ತಪಸ್ಸು, ಭಕ್ತಿ ನಡೆ, ನುಡಿ, ಆಚಾರ ಇವುಗಳನ್ನು ನೋಡಿಯಾದರೂ ನಾಲಿಗೆ ಉದ್ದ ಹರಿಯ ಬಿಡದೆ ನಡೆದುಕೊಳ್ಳಬೇಕಿತ್ತು. ಹೋಗಲಿ ತಮ್ಮ ವೇಷಕ್ಕಾದರೂ, ವ್ಯಕ್ತಿತ್ವ ಕ್ಕಾದರೂ ತಿಳಿದು ನಡೆದುಕೊಳ್ಳಬೇಡವೆ? ಅಕ್ಕನವರು ಈ ಲೋಕ ಎಂಥದು ಎಂಬುದನ್ನು ತಿಳಿದರು. ಇಲ್ಲಿ ಅಂಜಿದರೆ ಬದುಕಲು ಬರುವುದಿಲ್ಲ. ಎಲ್ಲವನ್ನು ಎದುರಿಸಲೆ ಬೇಕು. ಇಂತಹ ಪ್ರಸಂಗಗಳಿಗೆ ಅವರು ಸರಿಯಾಗಿ ಜಾಡಿಸಿ ಉತ್ತರ ನೀಡಿದ್ದಾರೆ. ನಿಮ್ಮ ವ್ಯಕ್ತಿತ್ವಕ್ಕಾದರೂ ನೀವು ಹೆದರಿ ನಡೆದುಕೊಳ್ಳಬೇಕು. ಇನ್ನೊಬ್ಬರಿಂದ ಉಗಿಸಿ ಕೊಳ್ಳುವುದಕ್ಕಿಂತ ಸಾಯುವುದು ವಾಸಿ. ಮನುಷ್ಯನಿಗೆ ಗುಣ, ಸನ್ನಡತೆಗಳು ಬಹಳ ಮುಖ್ಯ.ಒಂದು ಶ್ರೇಷ್ಠ ಸಮಾಜದ ನಿರ್ಮಾಣ ಎಂದರೆ, ಸ್ತ್ರೀಯರಿಗೆ ಪೂಜ್ಯತೆ ಗೌರವಗಳನ್ನು ನೀಡಿ, ನಡೆಸಿಕೊಳ್ಳುವುದೆ ಆಗಿದೆ . ಇಲ್ಲಿ ವಿಚಾರ ಮಾಡ ಬೇಕಾದ ಕೆಲವು ಸಂಗತಿಗಳಿವೆ. ನಿಮ್ಮನಿಲುವಿಂಗೆ ನೀವು ನಾಚಬೇಡವೆ? ಪ್ರತಿಯೊಬ್ಬರಿಗೂ ಒಂದು ವ್ಯಕ್ತಿತ್ವವಿರುತ್ತದೆ. ಈಘಟನೆಯನ್ನು ಅಕ್ಕಮಹಾದೇವಿಯರ ವ್ಯಕ್ತಿತ್ವದ ಮೂಲಕ ನೋಡಬೇಕು. ಅಕ್ಕನವರನ್ನು ಭೋಗಕ್ಕೆ ಅಹ್ವಾನಿಸಿದ ಕೆಲವರು

ಶರಣ ಮಾರ್ಗಕ್ಕೆ (ಅನುಭವ ಮಂಟಪದಲ್ಲಿ ಈ ರೀತಿಯ ತೊಂದರೆ ತುಂಬನೆ ಆಯಿತು ಕಿನ್ನರಿ ಬೌಮ್ಮಯ್ಯ ಇತರೆ ಶರಣರ ವರ್ತನೆ) ಬಂದವರೂ ಇದ್ದರು. ಇದು ಅಕ್ಕನವರಿಗೆ ದೊಡ್ಡ ಆಘಾತ. ಮಠ ಪೀಠಗಳಿಗೆ ಗುರುಗಳನ್ನು ಬಾಲ್ಯ ಕಾಲದಲ್ಲಿ ಮಾಡುವುದಕ್ಕಿಂತ ಸನ್ಯಾಸ ಬದುಕಿಗೆ ಎಳೆಯುವಮೊದಲು ಸಂಸಾರ ಜೀವನ ನಡೆಸಿ ಅನುಭಾವಜೀವನಕ್ಕೆ ಬರುವುದು ಒಳ್ಳೆಯದು. ಅಕ್ಕನಂತಹವರು ಮಾತ್ರ ಧೀರವೈರಾಗ್ಯಕ್ಕೆ ಅರ್ಹರು.

10) ನಿನ್ನರಿಕೆಯ ನರಕವೆ ಮೋಕ್ಷ ಕಂಡಯ್ಯ.
ನಿನ್ನರಿಯದ ಮುಕ್ತಿಯೆ ನರಕ ಕಂಡಯ್ಯ. ನೀನೊಲ್ಲದ ಸುಖವೆ ದುಃಖ ಕಂಡಯ್ಯ. ನೀನೊಲಿದ ದುಃಖವೆ ಪರಮಸುಖ ಕಂಡಯ್ಯ. ಚೆನ್ನಮಲ್ಲಿಕಾರ್ಜುನಯ್ಯ ನೀಕಟ್ಟಿ ಕೆಡಹಿದ ಬಂಧನವೆ ನಿರ್ಬಂಧನವೆಂದಿಪ್ಪೆನಯ್ಯ.

ವಚನದ ಅರ್ಥ

ನಿನ್ನರಿಕೆಯ ನರಕವೆ ಮೋಕ್ಷ ಕಂಡಯ್ಯ. ನಿನ್ನರಿಯದ ಮುಕ್ತಿಯೆ ನರಕ ಕಂಡಯ್ಯ. ನಿನಗೆ ನರಕ ಪ್ರೀತಿಯಾದರೆ ನನಗೆ ಅದೆ ಮೋಕ್ಷ ನಿನ್ನನ್ನು ಮುಕ್ತಿ ಅರಿಯದೆ ಹೋದರೆ ನನಗೆಲಿದೆ ನರಕ. ನೀನೊಲ್ಲದ ಸುಖವೆ ದುಃಖ ಕಂಡಯ್ಯ. ನೀನೊಲಿದ ದುಃಖವೆ ಪರಮಸುಖ ಕಂಡಯ್ಯ. ನಿನಗೆ ಯಾವ ಸುಖ ಬೇಡ, ಅದು ನನಗೂ ಅಸುಖ, ದುಃಖ, ನೀನು ದುಃಖವನ್ನು ಇಷ್ಟ ಪಟ್ಟರೆ ನನಗೆ ಅದೆ ಪರಮ ಸುಖ.ಚೆನ್ನ ಮಲ್ಲಿಕಾರ್ಜುನಯ ನೀಕಟ್ಟಿ ಕೆಡಹಿದ ಬಂಧನವೆ ನಿರ್ಬಂಧನ ವೆಂದಿಪ್ಪೆನಯ್ಯ. ಪರಮಾತ್ಮನೆ ನೀನು ಬಂಧನದಲ್ಲಿ ಕಟ್ಟಿ ಉರುಳಿಸಿದರೆ ಅದೆ ನನಗೆ ಸ್ವಾತಂತ್ರ್ಯ ಎಂದು ತಿಳಿಯುತ್ತೇನೆ.ಪರಮಾತ್ಮನನ್ನು ಅಕ್ಕಮಹಾದೇವಿಯವರು ಅದೆಷ್ಟು ಪ್ರೀತಿಸಿದ್ದಾರೆಂದರೆ ಉಪಮೆಗೆ ಮೀರಿದ ರೀತಿಯಲ್ಲಿ ಹಚ್ಚಿಕೊಂಡಿದ್ದಾರೆ. ಪ್ರೀತಿಸಿದವರಿಗೆ ಪ್ರೀತಿ ಪಾತ್ರರು ಏನೇ ಹೇಳಿದರೂ ಇಷ್ಟವಾಗುತ್ತದೆ. ಆ ವಿಚಾರ ಇಲ್ಲಿದೆ. ಲೌಕಿಕದಲ್ಲಿ ಪ್ರೀತಿಯಿದ್ದಂತೆ ಅನುಭಾವದಲ್ಲಿ ಭಕ್ತಿ. ಅಕ್ಕಮಹಾದೇವಿಯವರಿಗೆ ಚೆನ್ನಮಲ್ಲಿಕಾರ್ಜುನನೆ ಸರ್ವಸ್ವವಾಗಿದ್ದಾನೆ. ಪರಮಾತ್ಮನೆ ನಿನಗೆ ನರಕ ಇಷ್ಟವಾದರೆ ನನಗೂ ನರಕವೇ ಇರಲಿ.
ಅದೆ ನನಗೆ ಮೋಕ್ಷ. ನಿನ್ನನ್ನು ಮುಕ್ತಿ ಅರಿಯದಿದ್ದರೆ ಆ ಮುಕ್ತಿ ನನಗೂಬೇಡ ಅದು ನನಗೆ ನರಕ ಸಮಾನ. ನಿನಗೆ ಸುಖ ಬೇಡವಾದರೆ ನನಗೂ ಆ ಸುಖ ಬೇಡ ನಿನಗೆ ದುಃಖವೆ ಪ್ರಿಯವಾದರೆ ನನಗೂ ದುಃಖವೆ ಇರಲಿ. ಅದೆ ನನಗೆ ಪರಮಸುಖವೆಂದು ತಿಳಿಯುತ್ತೇನೆ. ಚೆನ್ನಮಲ್ಲಿಕಾರ್ಜುನನೆ ನೀನು ನನ್ನನ್ನು ಕಟ್ಟಿ ಕೆಡಹಿದ ಹುಟ್ಟು ಸಾವಿನ ಬಂಧನವನ್ನು ನಾನು ನಿರ್ಬಂಧನವೆಂದೆ ತಿಳಿದಿದ್ದೇನೆ. ನಿನಗೆ ನನ್ನ ಬಂಧನ ಇಷ್ಟವಾದರೆ ಅದನ್ನೆ ನಾನು ಮುಕ್ತಿಯೆಂದು ತಿಳಿಯುತ್ತೇನೆ.

11) ನಿತ್ಯ ತೃಪ್ತಂಗೆ ನೈವೇದ್ಯದ ಹಂಗೇತಕ್ಕೆ ? ಸುರಾಳ ನಿರಾಳಂಗೆ ಮಜ್ಜನದ ಹಂಗೇತಕ್ಕೆ
ಸ್ವಯಂ ಜ್ಯೋತಿರ್ಮಯಂಗೆ ದೀಪಾರಾಧನೆಯ ಹಂಗೇತಕ್ಕೆ?
ಸುವಾಸನಾ ಗಂಧ ಕರ್ಪೂರ ಗೌರಂಗೆ
ಪುಷ್ಪದ ಹಂಗೇತಕ್ಕೆ
ಮಾಟದಲಿ ಮನ ನಂಬುಗೆಯಿಲ್ಲದ, ಅಹಂಕಾರಕ್ಕೀಡಾದ,
ಭಕ್ತಿಯೆಂಬ ಪಸಾರವನಿಕ್ಕಿ
ಹೊಲೆಹದಿನೆಂಟುಜನ್ಮವ ಹೊರೆವುದರಿಂದ
ಅಂಗೈಯಲೊರಸಿ ಮುಕ್ತಿಯ
ಮೂಲ ಶಿಖಿರಂಧ್ರದ ಕಾಮನ ಸುಟ್ಟು
ಶುದ್ಧಸ್ಪಟಿಕ ಸ್ವಯಂಜ್ಯೋತಿಯನು

ಸುನಾಳದಿಂದ ಹಂ ಕ್ಷಂ ಎಂಬೆರಡಕ್ಷರವ ಸ್ವಯಾನುಭಾವಭಕ್ತಿ ನಿರ್ವಾಣವಾದವರನೆನಗೊಮ್ಮೆ ತೋರಿದೆ. ಶ್ರೀಗಿರಿ ಚೆನ್ನ ಮಲ್ಲಿಕಾರ್ಜುನಾ.

ಪದಗಳ ಅರ್ಥ

ಸುರಾಳನಿರಾಳ - ಸಗುಣ, ನಿರ್ಗುಣ.
ಗೌರ- ಬಂಗಾರದ ಬಣ್ಣ.

ವಚನದ ಅರ್ಥ

ಈವಚನದ ಭಾವ ಆಗಲೆ 3ವಚನಗಳಲ್ಲಿ ಅಕ್ಕನವರು ವಿವರಿಸಿದ್ದಾರೆ. ತನುಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು. ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯ.ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯ? ಈಮೂರು ವಚನಗಳಲ್ಲಿ ಈವಚನದ ಭಾವ ಆಗಲೆ ಬಂದಿದೆ ಅಕ್ಕನವರು ಪರಮಾತ್ಮನನ್ನು ನಿರಾಕಾರನೂ, ನಿರ್ಗುಣನೂ ಎಂದು ಅರಿವು ಪಡೆದಿದ್ದಾರೆ. ನಿತ್ಯ ತೃಪ್ತಂಗೆ ನೈವೇದ್ಯದ ಹಂಗೇತಕ್ಕೆ? ಹಸಿವೆ ಇರದ,ಯಾವಾಗಲೂ ತೃಪ್ತಿಯಿರುವ ದೇವರಿಗೆ ನೈವೇದ್ಯದ ಅಗತ್ಯವಿಲ್ಲ ಸುರಾಳ ನಿರಾಳಂಗೆ ಮಜ್ಜನದ ಹಂಗೇತಕ್ಕೆ. ಶರೀರಧಾರಿಯಲ್ಲದ ನಿರಾಕಾರ ನಿರ್ಗುಣನಾದವನಿಗೆ ಸ್ನಾನದ ಅವಶ್ಯಕತೆಯಿಲ್ಲ. ಸ್ವಯಂಜ್ಯೋತಿರ್ಮಯಂಗೆ ದೀಪಾರಾಧನೆಯ ಹಂಗೇತಕ್ಕೆ ? ತಾನೆ ಜೋತಿಗಳಿಗೆ ಮೂಲವಾಗಿ ಜೋತಿಯಾಗಿ ಬೆಳಗು ತಿರುವಾಗ ಅವನಿಗೆ ಜ್ಯೋತಿ ಆರತಿಯ ಅವಶ್ಯಕತೆಯಿಲ್ಲ.ಸುವಾಸನಾ ಗಂಧ ಕರ್ಪೂರ ಗೌರಂಗೆ ಪುಷ್ಪದ ಹಂಗೇತಕ್ಕೆ? ತಾನಜಗತ್ತಿನ ಎಲ್ಲಸಸ್ಯ ಗಳಿಗೆ ಹೂಗಳಿಗೆ ಪರಿಮಳ ನೀಡುವವನು . ಈ ಮೂಲಾಧಾರನಿಗೆ ಗಂಧ, ಕರ್ಪೂರ, ಪರಿಮಳ ಅರ್ಪಣೆ ಮಾಡುವ ಅಗತ್ಯವಾದರೂ ಎಲ್ಲಿದೆ. ?ನಮ್ಮ ಈ ಬಗೆಯ ಪೂಜೆಯು ಯಾವ ಭಕ್ತಿ ಪ್ರಕಟಮಾಡಬಲ್ಲುದು? ನಾವು ಅವನು ಕೊಟ್ಟದ್ದನ್ನೆ ಕೊಡುವೆವಾದರೆ ಭಕ್ತಿ ಯೆಂತಾದೀತು? ಭಕ್ತಿ ಎಂದರೆ ವಿಶೇಷವಾದುದನ್ನು ನಾವು ಅರ್ಪಿಸಬೇಕು.

12).ನಾನು ನಿನಗೊಲಿದೆ. ನೀನು ನನಗೊಲಿದೆ. ನಿನೆನ್ನಗಲದಿಪ್ಪೆ.ನಾನಿನ್ನಗಲದಿಪ್ಪೆನಯ್ಯ. ನಿನಗೆ ಎನಗೆ ಬೇರೊಂದು ಠಾವುಂಟೆ? ನೀನು ಕರುಣಿಯೆಂಬುದ ಬಲ್ಲೆನು ದೇವಾ. ನೀನಿರಿಸಿದ ಗತಿಯೊಳಗಿಪ್ಪವಳಾನಯ್ಯ. ನೀನೆ ಬಲ್ಲೆ ಚೆನ್ನಮಲ್ಲಿಕಾರ್ಜುನಾ.

ವಚನದ ಅರ್ಥ

ಇಷ್ಟಲಿಂಗವನ್ನು ಕರಸ್ಥಲದಲ್ಲಿರಿಸಿಕೊಂಡು ಪೂಜಾ,ಭಕ್ತಿಯಲ್ಲಿ ಮನಸ್ಸಿನ ಭಾವನೆಗಳನ್ನು ಪ್ರಕಟಮಾಡುತ್ತಿದ್ದಾರೆ. ಇದರಿಂದ ಭಾವನೆಗಳು ಪ್ರಕಟವಾಗಿ ಮನಸ್ಸು ಹಗುರವಾಗುವುದು.ನಾನು ನಿನಗೊಲಿದೆ. ನೀನು ನನಗೊಲಿದೆ. ನಾನು ನಿನ್ನನ್ನು ಪ್ರಿತಿಸಿದ್ದೇನೆ. ನೀನು ನನ್ನನ್ನುಪ್ರೀತಿಸಿರುವೆ. ನೀನೆನ್ನಗಲದಿಪ್ಪೆ, ನಾನಿನ್ನಗಲ ದಿಪ್ಪೆನಯ್ಯ. ನೀನು ಯಾವಾಗಲೂ ನನ್ನ ಕೊರಳಿನಲ್ಲಿ,ಕರಸ್ಥಲದಲ್ಲಿರುವೆ. ನಾನು ಕೂಡ ಯಾವಾಗಲೂ ನಿನ್ನನ್ನು ಧರಿಸಿರುವ ನಿರ್ಧಾರ ಮಾಡಿದ್ದೇನೆ. ನಿನಗೆ ನನಗೆ ಬೇರೊಂದು ಠಾವುಂಟೆ. ನನಗೆ ನಿನಗೆ ಬೇರೆ ಬೇರೆ ಸ್ಥಳವಿಲ್ಲ. ಇಬ್ಬರೂ ಒಂದೆ ಕಡೆ ಅಗಲದಂತೆ ಇರುತ್ತೇವೆ. ನೀನು ಕರುಣಿಯೆಂಬುದ ಬಲ್ಲೆನು ದೇವಾ, ನೀನು ದಯಾ ಮಯನು ಕರುಣಾಸಾಗರ ಎಂಬುದನ್ನು ತಿಳಿದಿದ್ದೇನೆ. ನೀನಿರಿಸಿದ ಗತಿಯೊಳಗಿ...

**13).ನಿತ್ಯವೆಂಬ ನಿಜಪದವೆನ್ನ ಹತ್ತೆ ಸಾರ್ದ ಬಳಿಕ ಚಿತ್ತ ಕರಗಿ ಮನ ಕರಗಿ ಹೃದಯವರಳಿತ್ತು ನೋಡಯ್ಯ.**
**ಒತ್ತಿ ಬಿಗಿದ ಸೆರೆಯೊಳಗೆ ಅತ್ತಿತ್ತಲೆಂದರಿಯದೆ ಚೆನ್ನಮಲ್ಲಿಕಾರ್ಜುನನ ಪಾದದಲ್ಲಿ ಮರೆದೊರಗಿದೆ ನೋಡಯ್ಯ.**

ಪದಗಳ ಅರ್ಥ

ನಿತ್ಯ-ಶಾಶ್ವತ.
ನಿಜಪದ-ನಿಜಮುಕ್ತಿ
ಹತ್ತೆ-ಹತ್ತಿರ.

ವಚನದ ಅರ್ಥ

ನಿತ್ಯವೆಂಬ ನಿಜಪದವೆನ್ನ ಹತ್ತೆ ಸಾರ್ದ ಬಳಿಕ ಚಿತ್ತ ಕರಗಿ ಮನ ಕರಗಿ ಹೃದಯ ವರಳಿತ್ತು ನೋಡಯ್ಯ.ಸತ್ಯಶಾಶ್ವತ ಎನ್ನುವ ನಿಜಮುಕ್ತಿ ಹತ್ತಿರ ಬಂದ ಮೇಲೆ ಚಿತ್ರ ಮನ ಕರಗಿದವು . ಹೃದಯ ಅರಳಿತು. ಒತ್ತಿ ಬಿಗಿದ ಸೆರೆಯೊಳಗೆ ಅತ್ತಿತ್ತಲೆಂದರಿಯದೆ ಚೆನ್ನಮಲ್ಲಿಕಾರ್ಜುನನ ಪಾದದಲ್ಲಿ ಮರೆದೊರಗಿದೆ ನೋಡಯ್ಯ.ಕಟ್ಟಿಹಾಕಿದ ಬಂಧನದಲ್ಲಿ ಚೆನ್ನಮಲ್ಲಿಕಾರ್ಜುನನ ಪಾದದಲ್ಲಿ ನಾನು ಅರಿವಿಲ್ಲದೆ ನಿದ್ರಿಸಿದೆ.ಅಕ್ಕಮಹಾದೇವಿಯವರು ಪರಮಾತ್ಮನಿಗಾಗಿ ,ಸಾಕ್ಷಾತ್ಕಾರಕ್ಕಾಗಿ ಬಹಳ ಹಂಬಲಿಸಿದರು. ಆ ದಾರಿ ತಿಳಿಯದೆ ಬಹಳ ಪರಿತಾಪಿಸಿದರು.
ಶ್ರೀ ಶೈಲದ ಗುಹೆಯಲ್ಲಿ
ಯೋಗ ಮಾರ್ಗದ ಧ್ಯಾನವಿಚಾರವನ್ನು ಬಹಳ ಪರಿಣಾಮಕಾರಿಯಾಗಿ ಅಲ್ಲಿನ ಯೋಗಿಗಳು ತಿಳಿಸಿಕೊಟ್ಟಿದ್ದಾರೆ.ಇದರಿಂದ ಅಕ್ಕನವರ ಮನಚಿತ್ತಭಾವಗಳು ಬಹಳ ಪ್ರಫುಲ್ಲ ಸ್ಥಿತಿ ತಲು ಪಿವೆ.ಅನುಭಾವದ ದಾರಿಯಲ್ಲಿ ಸರಿಯಾದ ಮಾರ್ಗದರ್ಶನವಾದಾಗ ಸತ್ಯದ ತಿಳಿ ವಳಿಕೆಯಿಂದ 'ಶಾಂತಿ ಸಮಾಧಾನಗಳು ಹೆಚ್ಚುತ್ತವೆ. ಜೀವನ ಏನು ಎನ್ನುವ ದರ್ಶನ 'ವಾಗುತ್ತದೆ. ಅಕ್ಕನವರು ಈಗ ನಿರಾಳ ಇದ್ದಾರೆ.

**14) ನಾಣ ಮರೆಯ ನೂಲು ಸಡಿಲೆ**
**ನಾಚುವರು ನೋಡಾ ಹೆಣ್ಣು ಗಂಡೆಂಬ ಜಾತಿ.**
**ಪ್ರಾಣದೊಡೆಯ ಜಗದೊಳಗೆ ತೆರಹಿಲ್ಲದಿರಲು ದೇವರ ಮುಂದೆ ನಾಚಲೆಡೆಯುಂಟೆ?**
**ಚೆನ್ನಮಲ್ಲಿಕಾರ್ಜುನ ಜಗವೆಲ್ಲ ಕಣ್ಣಾಗಿ ನೋಡುತ್ತಿರಲು**
**ಮುಚ್ಚಿ ಮರೆಯಿಸುವೆ ನೆಂತು ಹೇಳಾ ಅಯ್ಯ.**

ಪದಗಳ ಅರ್ಥ

ನಾಣ್-ಕಾಮನ ಮುದ್ರೆಗಳು. ಗುಪ್ತ ಇಂದ್ರಿಯಗಳು.

ವಚಪದ ಅರ್ಥ

ಅಕ್ಕ ಈ ವಚನದಲ್ಲಿ ವಾಸ್ತವವಾದಿಯಾಗಿ ಮಾತನಾಡುತ್ತಿದ್ದರೂ ಅದು ಮನದಾಳದ ಅಪಾರ ನೋವಿನಿಂದ ಬಂದ ಮಾತುಗಳು. ಪರಿಸ್ಥಿತಿಯ ಒತ್ತಡ ದಿಂದಾಗಿ ಅಕ್ಕನವರು ನಿರ್ವಾಣರಾಗಿ ಉಡುತಡಿಯಿಂದ ನಿರ್ಗಮಿಸುತ್ತಿದ್ದಾರೆ. ಈ ವಿಚಾರದಲ್ಲಿ ಚರ್ಚೆ ಇದೆ. ಅಕ್ಕನವರು ದಿಗಂಬರೆಯಾಗಿದ್ದರೊ ? ಉಡುಗೆ ಧರಿಸಿದ್ದರೊ? ಈ ವಿಚಾರದಲ್ಲಿ ಜಿಜ್ಞಾಸೆ ಇದೆ. ವಿದ್ವಾಂಸರು, ಅಕ್ಕಮಹಾದೇವಿಯವರು ಉಡುಗೆಯನ್ನು ಧರಿಸಿದ್ದರೆಂದು ಬರೆಯುತ್ತಾರೆ ಅದಕ್ಕೆ ಹರಿಹರನ ಕಾವ್ಯಗಳನ್ನು ಆಧಾರವಾಗಿ ಬಳಸಿಕೊಳ್ಳುತ್ತಾರೆ.ಕವಿ ಹರಿಹರನು ಪ್ರಧಾನಮಂತ್ರಿ ಕೇಶಿರಾಜರು ಭಂಡಾರಿ ಪದವಿಗೆ ರಾಜಿನಾಮೆ ನೀಡಿ ವಿಕ್ರಮಾದಿತ್ಯನ ರಾಜಧಾನಿಯಿಂದ ಹೊರಡುವಾಗ ಉಟ್ಟು ಕೇಶಾಂಬರಮಂ ಎಂದು ಚಿತ್ರಿಸಿದ್ದಾನೆ. ಅಂದರೆ ಕೇಶಿರಾಜರು ಕೂದಲು ಉಡುಗೆಯುಟ್ಟು ಬಂದರು ಎಂದು ಅರ್ಥವೆ?ರಾಜಪೋಷಾಕು ತೊರೆದು ವೈರಾಗ್ಯದ ಉಡುಗೆಯುಟ್ಟು ಬಂದರು ಎಂದು ಅರ್ಥ. ಆದರೆ ಅಕ್ಕನ ವರ ಪ್ರಸಂಗ ಇದಕ್ಕಿಂರ ತುಸು ಭಿನ್ನವಾಗಿದೆ. ಮೇಲಿನವಚನದಪ್ರಕಾರ ಅಕ್ಕನವರು ಬಯಲುಡುಗೆಯುಟ್ಟಿದ್ದರೆಂದು ಅರ್ಥವಾಗುತ್ತದೆ. ಅನುಭವಮಂಟಪದ ಚರ್ಚೆ ಕೂಡ ಕೂದಲುವಿಚಾರದಲ್ಲಿ ನಡೆಯುವುದರಿಂದ ಅಕ್ಕನವರು ನಿರ್ವಸ್ತ್ರರಾಗಿದ್ದರು. ಮತ್ತು ಕೂದಲನ್ನೆ ಉಡುಗೆಯಾಗಿ ಧರಿಸಿದ್ದರೆಂದು ಅರ್ಥವಾಗುತ್ತದೆ. ಬಹಶಃ ಕುರಿ ಕಂಬಳಿಯ ಕರಿಕೂದಲನ್ನೇನಾದರೂ ಉಡುಗೆಯಾಗಿ ವಿಶೇಷ ಭಕ್ತರು ಮಾಡಿ ಕೊಟ್ಟಿರಬಹುದು. ಉತ್ತರ ಕರ್ನಾಟಕದಲ್ಲಿ ಕೆಲವು ಸ್ವಾಮಿಗಳು ಕಂಬಳಿಯನ್ನೆ ಉಡುಗೆ ಮಾಡಿಕೊಂಡಿದ್ದ ದೃಷ್ಟಾಂತಗಳಿವೆ ಇನ್ನು ಕೆಲವರು ಗೋಣಿಚೀಲವನ್ನು ಉಡುಗೆ ಮಾಡಿಕೊಂಡಿದ್ದೂ ಇದೆ. ಅಂತೂ ಅಕ್ಕಮಹಾದೇವಿಯವರು ಯಾವರೀತಿ ಉಡುಪಿನಲ್ಲಿದ್ದರು ಎಂಬುದನ್ನು ಖಚಿತವಾಗಿ ಹೇಳಲಾಗದು.

ನಾಣಮರೆಯ ನೂಲು ಸಡಿಲೆ ನಾಚುವರು ನೋಡಾ ಹೆಣ್ಣು ಗಂಡೆಂಬ ಜಾತಿ. ಪುರುಷನಾಗಲಿ, ಮಹಿಳೆಯಾಗಲಿ ದೇಹದ ಉಡುಪು ತುಸು ಸರಿದರೂ ಲಜ್ಜೆ, ನಾಚಿಕೆಗೆ ಒಳಗಾಗುತ್ತಾರೆ. ಪ್ರಾಣದೊಡೆಯ ಜಗದೊಳಗೆ ತೆರಹಿಲ್ಲದಿರಲು ದೇವರ ಮುಂದೆ ನಾಚಲೆಡೆಯುಂಟೆ? ಜೀವಜಾಲವೆಲ್ಲದರ ಪ್ರಾಣದೊಡೆಯನಾದ ಪರಮಾತ್ಮನು ಎಲ್ಲಕಡೆ ತುಂಬಿರುವಾಗ ದೇವರ ಮುಂದೆ ನಾಚಬಹುದೆ? ಚೆನ್ನಮಲ್ಲಿಕಾರ್ಜುನ ಜಗವೆಲ್ಲ ಕಣ್ಣಾಗಿ ನೋಡುತ್ತಿರಲು ಮುಚ್ಚಿಮರೆಯಿಸುವೆನೆಂತು ಹೇಳಾ? ಚೆನ್ನ ಮಲ್ಲಿಕಾರ್ಜುನನು ಜಗವೆಲ್ಲ ಕಣ್ಣಾಗಿ ನೋಡುತ್ತಿದ್ದಾನೆ. ಹೀಗಿರುವಾಗ ಅವನೆದುರು ಮುಚ್ಚಿಮರೆಯಿಸಲು ಸಾಧ್ಯವೆ? ಈ ವಚನದ ಆಧಾರದಿಂದ ಅಕ್ಕಮಹಾದೇವಿಯವರು ಬಯಲನ್ನೆ ಉಡುಗೆಯಾಗಿ ಉಟ್ಟಿದ್ದರೆಂದು ಖಚಿತವಾಗಿ ಹೇಳಬಹುದು. ರಾಜ ಕೌಶಿಕನಿಂದ ದೌರ್ಜನ್ಯಕ್ಕೊಳಗಾದ ಅಕ್ಕ ಮಹಾದೇವಿಯವರು ವಸ್ತ್ರದ ಹಂಗೆ ಅಗತ್ಯವಿಲ್ಲವೆಂದು ಕಠಿನ ನಿರ್ಧಾರಕ್ಕೆ ಬಂದು ಉಡುಗೆಯನ್ನು ನಿರಾಕರಿಸಿದ್ದಾರೆ.ಅಕ್ಕನವರ ಮನಸ್ಸಿಗಾದ ಆಘಾತ ಯಾವ ಮಾತುಗಳೂ ಹೇಳಲಾರವು. ಪರಮಾತ್ಮನೆ ಸರ್ವಸ್ವವೆಂದು ಬಂದರೆ ಮೇರೆಮೀರಿದ ದುಃಖವೆ? ದುಃಖವನ್ನು ಎಷ್ಟೆಂದು ಸಹಿಸಲು ಸಾಧ್ಯ?

**15)**ನಚ್ಚುಗೆ ಮನ ನಿಮ್ಮಲ್ಲಿ ಮೆಚ್ಚುಗೆ ಮನ ನಿಮ್ಮಲ್ಲಿ
ಸಲ್ಲುಗೆ ಮನ ನಿಮ್ಮಲ್ಲಿ ಸೋಲುಗೆ ಮನ ನಿಮ್ಮಲ್ಲಿ ಅಳಲುಗೆ ಮನ ನಿಮ್ಮಲ್ಲಿ ಬಳಲುಗೆ ಮನ ನಿಮ್ಮಲ್ಲಿ
ಕರಗುಗೆ ಮನ ನಿಮ್ಮಲ್ಲಿ ಕೊರಗುಗೆ ಮನ ನಿಮ್ಮಲ್ಲಿ ಎನ್ನ ಪಂಚೇಂದ್ರಿಯಂಗಳು ಕಬ್ಬುನ ಉಂಡ ನೀರಿನಂತೆ
ನಿಮ್ಮಲ್ಲಿ ಬೆರಸುಗೆ ಚೆನ್ನಮಲ್ಲಿಕಾರ್ಜುನಾ.

ವಚನದ ಅರ್ಥ

ಇದು ಹಾಡಲು ತುಂಬ ಸುಂದರವಾದ ವಚನ.ಅಕ್ಕಮಹಾದೇವಿಯವರು ಆರಂಭದ ಭಕ್ತಿಯಲ್ಲಿ ತೊಡಗಿದಾಗ ಪರಮಾತ್ಮನನ್ನುಪತಿಯನ್ನಾಗಿ ಪಡೆಯಲೆ ಬೇಕೆಂಬ ಪ್ರೀತಿಯಿಂದ ಉತ್ಕಟವಾಗಿ ಹಾಡಿಕೊಂಡ ವಚನ ಇದು. ನವನವೋನ್ಮೇಷವಾದ ತಾರುಣ್ಯದ ಪ್ರೀತಿ ಉತ್ಕಟವಾಗಿ ಅವರಲ್ಲಿ ಉಕ್ಕೇರುವ ಕಾಲಕ್ಕೆ ಪರಮಾತ್ಮನನ್ನು ಗಂಡನನ್ನಾಗಿ ಪಡೆಯಲೇಬೇಕೆಂಬ ಮುಗ್ಧ ಭಕ್ತಿಯಿಂದ ಹಾಡಿ ಕೊಂಡವಚನವಿದು. ನನ್ನ ಪ್ರೀತಿಯ ಅಚ್ಚುನೀನು ಮೆಚ್ಚುಗೆ ನೀನು. ನನ್ನ ಮನಸ್ಸು ನಿನ್ನಲ್ಲಿ ಸಲ್ಲಲಿ. ನನ್ನ ಮನಸ್ಸು ನಿನಗೆ ಸೋತಿದೆ.ನನ್ನ ಮನಸ್ಸು ನಿನಗಾಗಿ ಅತ್ತಿದೆ. ನನ್ನ ಮನಸ್ಸು ನಿನಗಾಗಿ ಬಳಲಿದೆ. ನಿನಗಾಗಿಯೆ ಕರಗಿಹೋಗಿದ್ದೇನೆ. ಕೊರಗಿದ್ದೇನೆ. ನನ್ನ ಐದು

ಇಂದ್ರಿಯಗಳು ಕಾದ ಕಬ್ಬುನ ನೀರುಕುಡಿಯುವಂತೆ ನಿನ್ನಲ್ಲಿ ಒಂದಾಗುವುದಕ್ಕಾಗಿ ಕಾತರಿಸಿವೆ. ಪರಮಾತ್ಮ ಚೆನ್ನಮಲ್ಲಿಕಾರ್ಜುನನೆ ನಾನು ನಿನ್ನನ್ನು ಪ್ರೀತಿಸಿ ದ್ದೇನೆ . ನನ್ನ ಪ್ರೀತಿಯನ್ನು ಸ್ವೀಕಾರಮಾಡು.

**16)ನೋಡಿಹೆನೆಂದರೆ ದೃಷ್ಟಿ ಮರೆಯಾಯಿತ್ತು.**
**ಕೂಡಿಹೆನೆಂದರೆ ಭಾವ ಮರೆಯಾಯಿತ್ತು.**
**ಏನೆಂಬೆನಯ್ಯ?ಎಂತೆಂಬೆನಯ್ಯ? ಅರಿದಿಹೆನೆಂದಡೆ ಮರಹು ಮರೆಯಾಯಿತ್ತು.**
**ನಿನ್ನ ಮಾಯೆಯ ನತಿಗಳೆವಡೆ ಎನ್ನಳವೆ ? ಕಾಯಯ್ಯ ಕಾಯಯ್ಯ ಚೆನ್ನಮಲ್ಲಿಕಾರ್ಜುನಾ.**

## ಪದಗಳ ಅರ್ಥ

ಅತಿಗಳೆ-ತಿರಸ್ಕರಿಸು
ಅಳವು- ಶಕ್ತಿ-ಸಾಮರ್ಥ್ಯ.
ಕಾಯಯ್ಯ-ಕಾಪಾಡು.

## ವಚನದ ಅರ್ಥ

ನೋಡುತ್ತೇನೆಂದರೆ ನೀನು ದೃಷ್ಟಿಗೆ ಕಾಣುತ್ತಿಲ್ಲ. ಕೂಡುತ್ತೇನೆಂದರೆ ಭಾವ ದಲ್ಲಿಯೂ ಸಾಧ್ಯವಾಗುತ್ತಿಲ್ಲ. ಏನೆಂದು ಹೇಳಲಿ? ಎಂತು ವಿವರಿಸಲಿ.? ತಿಳಿವಳಿಕೆಯಿಂದಲಾದರೂ ನಿನ್ನನ್ನು ತಿಳಿಯುತ್ತೇನೆಂದರೆ ನನ್ನಲ್ಲಿ ಮರೆವು ಆವರಿಸಿದೆ. ನೀನು ಯಾವ ಮಾಯೆಯನ್ನು ಹರಡಿರುವೆ ಅದನ್ನು ತಿರಸ್ಕರಿಸುವೆ ಎಂದರೆ ಅದು ನನ್ನಿಂದ ಸಾಧ್ಯವೆ? ಕಾಪಾಡು ಕಾಪಾಡು ಚೆನ್ನಮಲ್ಲಿಕಾರ್ಜುನಾ. ಇದು ಅವರಮೊರೆ. ಶಿವನ ಅನುಗ್ರಹ ಗಳಿಸಲು ನಮಗಿರುವುದೊಂದೆ ದಾರಿ.ತಪಸ್ಸು ಧ್ಯಾನ. ಅಕ್ಕಮಹಾದೇವಿಯವರು ಶ್ರೀ ಶೈಲದ ಗುಹೆಯಲ್ಲಿ ತಪಸ್ಸಿಗೆ ಕುಳಿತಿದ್ದಾರೆ. ಒಂದುಕಡೆ ಧುಮ್ಮಿಕ್ಕಿ ಹರಿವ ಕೃಷ್ಣ ನದಿ ಹಸಿರುಕಾಡು,ಬೆಟ್ಟ ಗುಡ್ಡ.
ನಿತ್ಯ ಇಷ್ಟಲಿಂಗಪೂಜೆಯ ದಿನಚರಿ. ಇಷ್ಟ ಲಿಂಗವನ್ನು ಕರಸ್ಥಲದಲ್ಲಿಟ್ಟು ತದೇಕವಾಗಿ ನೋಡುತ್ತಾರೆ. ನೋಡಿ ನೋಡಿ ದೃಷ್ಟಿ ಗಳು ಸೋಲುತ್ತವೆ. ಮನಸ್ಸು ನೆನೆಯುತ್ತದೆ, ಆ ಮನಸ್ಸಿನ ಬಲದಿಂದ ಭಾವದಲ್ಲಿ ಕೂಡುವೆ ಎಂದರೆ ನೀನು ಭಾವಕ್ಕೆ ದೂರನಾಗಿರುವೆ. ಅರಿವು ಮರೆವು ಮರೆಯಾಗಿ ಹೋದವು. ಎಚ್ಚರವೊ?ನಿದ್ರೆಯೋ ? ನಿನ್ನ ಮಾಯೆಯನ್ನು ದೂರ ಮಾಡುತ್ತೇನೆ ಎಂದರೆ ಶರೀರ ಮಾಯೆಯ ಆಟದ ಬಯಲು. ಮಾಯೆ ಮೀರುವುದೆಂತು?